

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 37 ಸಂಚಿಕೆ 4 KARMUL/2021/79912 BENGALURU ಜನವರಿ–ಮಾರ್ಚ್ 2025 ಬೆಲೆ:ರೂ. 10/–



ಪೇಜಾವರ
ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ
ಸ್ವಾಮೀಜಿಗಳೊಂದಿಗೆ
ಸಂದರ್ಶನ



ಕ್ರೀಡಾ ಮಿಲನ





ವಾರ್ಷಿಕೋತ್ಸವ

**ಮುಂದಿನ ಕಾರ್ಯಕ್ರಮ**

ವಸಂತೋತ್ಸವ 11.05.2025

ದೀಪ ದುರ್ಗಾ ನಮಸ್ಕಾರ 27.07.2025



ಆನಂದ ಮಿಲನ, ಕಿಕ್ಕಿರಿದ ಸಭಾಂಗಣ

*With best compliments from*

# TEDMAG
# ENGINEERING & MANAGEMENT CONSULTANTS (P) LTD.

Swagat, 1209, 11th Cross
HSR Layout Sector I, Bangalore – 560 102
Tel.: +91 (0)80 22586129
Fax: +91 (0)80 22589134

**E-mail:**
Bangalore:tedmagemc@hotmail.com
sridhar_bhat@yahoo.com
Chennai:myram47@gmail.com
Mumbai:mindi1940@yahoo.com

- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**

## EXECUTIVE COMMITTEE MEMBERS 2024-2026


**President**
Sri. B Ramachandra Upadhya 99024 00072

**Vice Presidents**
Sri. P.C Rao 98444 94630
Sri. K N Adiga Adoor 96862 04659

**Secretary**
Sri. M Sathyanarayana Bhat 99458 02607

**Treasurer**
Sri. Gopalakrishna Kunjathaya K 99801 28059

**Convener, Cultural Committee**
Sri. T S Nagaraja Upadhyaya 93412 26763

**Convener, Religious Committee**
Sri. Y Jayantha Rao 94482 74519

**Convener, Youth Wing**
Sri. Gururaj Pejavar 98440 09293

**Convener, Membership Development Committee**
Sri. M Dinesh Rao 99456 88955

**Convener, Public Relation Wing**
Sri. M K Gurumurthy 98440 22692

**Convener, Community Services Wing**
Sri. A Sandeep Rao 98450 98150

**Convener, Media & Communication Wing**
Sri. Ranjith Yadapadithaya 95919 94646

**Convener, Education Assistance Programme**
Sri. Y Radhakrishna 98440 58851

**Editor, Bhrugu Vani**
Sri. Maroli Krishna Prasad 98450 18183

**Members/Co-opted Members**
Sri. S Haridas Upadhya 94480 01892
Sri. M Mohan Rao 98453 79955
Sri. H Ramesh Bhat 98450 24708
Sri. P N Vishnumurthy Kuddannaya 94803 05426
Dr. ( Smt) Veena Sharath 99860 80271
Smt. Madhavi Ballal 99860 39107

**Past Presidents /Permanent Invitees**
Sri. S T R Mady 99029 77948
Sri. U A P Ballal 99860 28602
Sri. K Vasudeva Rao 98450 57111
Sri. P S Bagilthaya 98440 83582
Smt. Geetha Vasudeva Rao 94499 23456
Smt. S Vijayalakshmi Bhat 98441 52107

**Invitee Members**
Sri. Y Shreepathi Bhat 98441 52107
Sri. S N Sharathchandra 98860 40271
Sri. U V Krishna Murthy 98440 24136
Sri. S Jayaprakash Mady 98450 09669
Sri. B S Balachandra Tolpady 94481 34268
Sri. K Prakash Bhat 98455 06777
Sri. Madhava Upadhya 94480 41424
Sri. Matti Ramachandra Rao 94486 70741
Sri. B Sudhindra Rao 98459 99229
Sri. K Rajesh Bhat 98443 89699
Smt. Sudha M Rao 99011 27738
Smt. Geetha P R Rao 99459 38411
Smt. Vijayalaksmi Upadhya 94496 55453
Smt. Meena Mahabaleshwara 98456 21250
Smt. Shobha Radhakrishna 98447 25547
Smt. Sowmya K V 98862 00062


## ಒಳಪುಟಗಳಲ್ಲಿ....


| | |
|---|---|
| ಅಧ್ಯಕ್ಷರ ನುಡಿ | 3 |
| Editorial | 5 |
| ವಸಂತೋತ್ಸವಕ್ಕೆ ಆಹ್ವಾನ | 6 |
| ಸಂದರ್ಶನ | 7 |
| ಆನಂದ ಮಿಲನ – 2025 | 10 |
| ಕ್ರೀಡಾಮಿಲನ – 2025 | 13 |
| ಸಂಭ್ರಮದ ವಾರ್ಷಿಕೋತ್ಸವ | 17 |
| ಚುಂಚಮ್ಮನ ಗೂಡು | 19 |
| Ananda Balaga's Enduring Bond with Hotel Ajantha (2004–2024) | 21 |
| ಸಂಗೀತದ ಮೇಲ್ನೋಟ | 23 |
| ಢಕ್ಕೆ ಬಲಿ – ಶ್ರೀ ಖಡ್ಗೇಶ್ವರಿ ಸಾನ್ನಿಧ್ಯದ ಬ್ರಹ್ಮಸ್ಥಾನ | 25 |
| ಸಭೆ, ಸಮಾರಂಭ ಪ್ರಶಸ್ತಿ | 27 |
| Entrepreneurship - Divine valley Resorts | 29 |
| ಏಪ್ರಿಲ್ – ಜುಲೈ 2025ರ ವಿಶೇಷ ದಿನಗಳು | 31 |
| New Members of Ananda Balaga From 1st October 2024 to 31st March 2025 | 31 |
| ಅನಿಸಿಕೆ | 33 |
| ನಮ್ಮವರಿಂದ ನಮ್ಮವರಿಗಾಗಿ | 33 |
| ಆನಂದ ಸಭಾಗೃಹದ ಬಾಡಿಗೆಯಲ್ಲಿ ಬಳಗದ ಸದಸ್ಯರಿಗೆ ರಿಯಾಯಿತಿ | 35 |
| Body, Mind and breath | 37 |



| ಜಾಹೀರಾತುದಾರರ ಗಮನಕ್ಕೆ | ದರಗಳು |
|---|---|
| ಪೂರ್ಣ ಪುಟ | ರೂ. 2,750/– |
| ಅರ್ಧ ಪುಟ | ರೂ. 1,500/– |
| ಕಾಲು ಪುಟ | ರೂ. 750/– |

ಸಂಪರ್ಕಿಸಿ : 98450 18183 krispa8888@gmail.com


### ಶುಭಾಶಯಗಳು

ಭೃಗುವಾಣಿಯ ಸಮಸ್ತ ಓದುಗ ಬಂಧುಗಳಿಗೆ,
ಜಾಹೀರಾತುದಾರರಿಗೆ ಮತ್ತು ಆನಂದ ಬಳಗದ
ಎಲ್ಲಾ ಸದಸ್ಯ ಬಾಂಧವರಿಗೆ ಹೊಸವರ್ಷ, ಅಕ್ಷಯ
ತೃತೀಯ ಮತ್ತು ವಸಂತೋತ್ಸವದ ಶುಭಹಾರೈಕೆಗಳು.

ಸಂಪಾದಕ ಮಂಡಳಿ

*Best Compliments from*

# Hotel Dwaraka

**Anand Rao Circle, Bangalore - 560 009**

**Late N.R. Narayana Rao**
Managing Partner




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ,
ಬೆಳಕಿರುವ, ನಿರಂತರ ನೀರು ವಿದ್ಯುತ್ ಸರಬರಾಜಿರುವ,
ಅತಿ ಹೆಚ್ಚಿಲ್ಲದ ಬಾಡಿಗೆಯಿರುವ, ವಿಶಾಲವಾದ ಕೊಠಡಿಗಳು,
ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ.
ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ

ದೂರವಾಣಿ : 22265011 (8 ಮಾರ್ಗಗಳು),
22268263, 22268264

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ
ಸಂಪುಟ 37 ಸಂಚಿಕೆ 04

ಅಧ್ಯಕ್ಷರು
ಬಾಳೆಕುದ್ರು ರಾಮಚಂದ್ರ ಉಪಾಧ್ಯ

ಕಾರ್ಯದರ್ಶಿ
ಎಂ. ಸತ್ಯನಾರಾಯಣ ಭಟ್

ಸಂಪಾದಕರು
ಮರೋಳಿ ಕೃಷ್ಣ ಪ್ರಸಾದ್

ಸಂಪಾದಕ ಮಂಡಳಿ
ಎಸ್. ಹರಿದಾಸ ಉಪಾಧ್ಯ
ಕೆ.ಎನ್. ಅಡಿಗ

ವರದಿ ಲೇಖನ ಸಹಕಾರ
ಟಿ.ಎಸ್.ನಾಗರಾಜ ಉಪಾಧ್ಯಾಯ
ಡಾ. ವೀಣಾ ಶರತ್
ಡಿ. ಶರತ್ ಕುಮಾರ್

ಜಾಹೀರಾತು ಸಮನ್ವಯ
ಗೋಪಾಲಕೃಷ್ಣ ಕುಂಜತ್ತಾಯ
ಎಂ.ಕೆ. ಗುರುಮೂರ್ತಿ
ವೈ. ಜಯಂತ್ ರಾವ್


ಛಾಯಾಗ್ರಹಣ
ಮಟ್ಟಿ ರಾಮಚಂದ್ರ ರಾವ್

ಪ್ರಸರಣ ಸಹಕಾರ
ರಂಜಿತ್ ಯಡಪಡಿತ್ತಾಯ

ವಿಳಾಸ
ಆನಂದ ಬಳಗ
ಆನಂದ ಸಭಾಗೃಹ, ನಂ. 23
ಗೊಲ್ಲಹಳ್ಳಿ, ಬನ್ನೇರಘಟ್ಟ ಮುಖ್ಯರಸ್ತೆ
ಬನ್ನೇರುಘಟ್ಟ
ಬೆಂಗಳೂರು–560 083

website
www.anandabalaga.org

# ಅಧ್ಯಕ್ಷರ ನುಡಿ



ಹರಿಃಓಂ

ಆನಂದ ಬಳಗದ ಸರ್ವಸದಸ್ಯ ಬಂಧುಗಳಿಗೂ ವಿಶ್ವಾವಸು ಸಂವತ್ಸರದ ಯುಗಾದಿ ಹಬ್ಬದ ಶುಭಹಾರ್ರೈಕೆಗಳು.

ನೂತನ ವಿಶ್ವಾವಸು ಸಂವತ್ಸರವು ತನ್ನ ಹೆಸರೇ ಅನ್ವರ್ಥವಾಗುವಂತೆ ದೇಶಕ್ಕೆಲ್ಲ ಸುಖ, ಸಂಪತ್ಸಮೃದ್ಧಿಗಳನ್ನು ಒದಗಿಸಲಿ, ಎಲ್ಲರ ಅಭೀಷ್ಟಗಳನ್ನು ಈಡೇರಿಸಲಿ, ಬಳಗದ ಸರ್ವಸದಸ್ಯರಿಗೆ ಮತ್ತು ನಾಡಿಗೆ ಶ್ರೇಯಸ್ಸನ್ನು ಒದಗಿಸಲಿ ಎಂದು ಆಶಯ.

ಕಳೆದ ಕ್ರೋಧಿ ಸಂವತ್ಸರದಲ್ಲಿ ಜಗತ್ತಿನಾದ್ಯಂತವೂ ಅನೇಕ ಉತ್ಪಾತಗಳು, ಯುದ್ಧಗಳು, ಹಿಂಸಾಚಾರಗಳು ವರದಿಯಾಗುತ್ತಾ ಇದು ಸಂವತ್ಸರದ ಹೆಸರಿನ ಪರಿಣಾಮವೇ ಎಂಬಂತೆ ಅನೇಕ ಜ್ಯೋತಿಷಿಗಳು ಮತ್ತು ದಾರ್ಶನಿಕರು ಮಾತುಗಳನ್ನಾಡಿದ್ದನ್ನು ಕೇಳಿದ್ದೇವೆ. ಅಂತಹ ಕ್ರೋಧಿ ಸಂವತ್ಸರವು ಮುಗಿದಿದೆ.

ಅದೇ ಕ್ರೋಧಿ ಸಂವತ್ಸರದಲ್ಲಿ ನಮ್ಮ ದೇಶದಲ್ಲಿ ಜಗತ್ತೇ ಅಚ್ಚರಿ ಪಡುವಂತೆ ಒಂದು ಕಾರ್ಯಕ್ರಮವು ನಡೆಯಿತು. ಅದೇ ಕುಂಭಮೇಳ. ಪ್ರಯಾಗರಾಜ್‌ನಲ್ಲಿ ನಡೆದ ಈ ಕಾರ್ಯಕ್ರಮವು ಅಭೂತಪೂರ್ವ ಎಂಬಂತಹ ಅಭಿಪ್ರಾಯವನ್ನು ಸಾರ್ವತ್ರಿಕವಾಗಿ ಮೂಡಿಸಿದ್ದು ಅತಿಶಯವಲ್ಲ. ದೇಶದ ಜನಸಂಖ್ಯೆಯೇ ನೂರಿಪ್ಪತ್ತು ಕೋಟಿ ಇರುವಾಗ ಅದರಲ್ಲಿ ಸರಿಸುಮಾರು ಅರ್ಧಭಾಗದಷ್ಟು ಜನಸಂಖ್ಯೆ ಅಂದರೆ 60 ಕೋಟಿಗೂ ಮಿಕ್ಕಿದ ಜನತೆ ಪ್ರಯಾಗರಾಜ್‌ಗೆ ಬಂದು ಮಿಂದೆದ್ದು ಹೋದರೆಂದರೆ ಮತ್ತು ಅದರಲ್ಲಿ ನಮ್ಮ ದೇಶದವರು ಮಾತ್ರವಲ್ಲ. ಹತ್ತಾರು ದೇಶಗಳ ಪ್ರಜೆಗಳೂ ಬಂದಿದ್ದರೆನ್ನುವುದು ಅಚ್ಚರಿಯ ಸಂಗತಿಯೇ. ಈ ಅದ್ಭುತಕ್ಕೆ, ಅಚ್ಚರಿಗೆ ನೂರಾರು ವಿಜ್ಞಾನಿಗಳು ಮತ್ತು ಪತ್ರಕರ್ತರೂ ಪ್ರತ್ಯಕ್ಷ ಸಾಕ್ಷಿಗಳಾದದ್ದು ವಿಶೇಷ.

ಕಾರ್ಯಕ್ರಮವು ಹಿಂದೂ ಧರ್ಮಕ್ಕೆ, ಸನಾತನ ಆಚರಣೆಗೆ ಸಂಬಂಧಿಸಿದ್ದಾದರೂ ಅನ್ಯಧರ್ಮಗಳ ಸಾವಿರಾರು ಮಂದಿ ಈ ಕುಂಭಮೇಳಕ್ಕೆ ಬಂದು ಮಿಂದು ಪುನೀತರಾದರೆಂದರೆ ನಮ್ಮ ಧರ್ಮದ ಸೆಳೆತ, ಗುರುತ್ವಾಕರ್ಷಣೆ ಎಷ್ಟಿದೆಯೆಂದು ಊಹಿಸಬಹುದು.

ವಿಶ್ವಗುರುವಾಗುವ ಯೋಗ್ಯತೆ ಇರುವುದು ಸನಾತನ ಧರ್ಮಕ್ಕೆ ಮಾತ್ರವೆನ್ನುವುದಕ್ಕೆ ಬೇರೆ ಉದಾಹರಣೆಗಳು ಬೇಡ. ನಮ್ಮ ಬಳಗದಲ್ಲೂ ಅನೇಕ ಮಂದಿ ಕುಂಭಮೇಳದಲ್ಲಿ ಮಿಂದು ಪಾವನರಾಗಿದ್ದಾರೆ. ಅವರೆಲ್ಲರಿಗೆ ಅಭಿನಂದನೆಗಳು.

ವಸಂತ ಮಾಸವು ಆರಂಭವಾಗಿದೆ. ಋತುಗಳಲ್ಲಿ ವಸಂತವೇ ಶ್ರೇಷ್ಠ ಎಂದು ಹೇಳುತ್ತಾರೆ. ಪ್ರಕೃತಿಯಲ್ಲಿ ಅಪೂರ್ವ ಬದಲಾವಣೆಗಳನ್ನು ನಾವು ವಸಂತೋದಯದಲ್ಲಿ ಕಾಣಬಹುದು. ಕೃಷಿಯಲ್ಲಿ, ಮರಗಿಡಗಳಲ್ಲಿ ಹೊಸಚಿಗುರು, ಫಲಪುಷ್ಪ ಮತ್ತು ಬೆಳೆಗಳ ಸಮೃದ್ಧಿಯು ನಮ್ಮಲ್ಲಿ ಆಹ್ಲಾದವನ್ನುಂಟು ಮಾಡುತ್ತದೆ. ಪ್ರಕೃತಿಯು ಶ್ರೀಮಂತವಾಗಿ ಕಾಣಿಸುತ್ತದೆ.

ಪ್ರತಿ ಋತುವನ್ನು, ಪ್ರತಿ ಸೌರ–ಚಾಂದ್ರ ಮಾಸಗಳನ್ನು, ಪ್ರತಿಸಂವತ್ಸರವನ್ನು ಆಚರಿಸುವುದಕ್ಕೆ ಮತ್ತು ಸಂಭ್ರಮಿಸುವುದಕ್ಕೆ ನಮ್ಮ ಸನಾತನ ಧರ್ಮದಲ್ಲಿ ವಿಶಿಷ್ಟವಾದ ಹಬ್ಬಗಳ ಸರಮಾಲೆಯೇ ಇದೆ. ಅಂತಹ ಹಬ್ಬಗಳಲ್ಲಿ ವಸಂತೋತ್ಸವವೂ ಒಂದು. ನಮ್ಮ ಆನಂದ ಬಳಗದ ಹಲವಾರು ನಿಗದಿತ ಕಾರ್ಯಕ್ರಮಗಳಲ್ಲಿ ವಸಂತೋತ್ಸವವೂ ಒಂದು. ವಸಂತೋತ್ಸವದಲ್ಲಿ ಪಾಲ್ಗೊಂಡು ಯಶೋಭಾಗಿಗಳಾಗಿ.

ಮತ್ತೊಮ್ಮೆ ನವಸಂವತ್ಸರದ ಹಾರ್ರೈಕೆಗಳೊಂದಿಗೆ

ಬಾಳೆಕುದ್ರು ರಾಮಚಂದ್ರ ಉಪಾಧ್ಯ

# FRIDGE HOUSE

## Wholesaler & Importers

M/s Copeland India Pvt. Ltd.

M/s Gujarat Flurochemicals Ltd.

M/s Hicool Electronic Industries


Scroll


Sealed


Semi Hermetic


Scroll Condensing Unit


Dixell Controls


Tie


Fan & Motor
Hicool


Split AC


Copper pipes & Insulation Materials

EQUIPMENTS & COMPONENTS. for

*HVAC & R, *COLD ROOMS, *RIPENING CHAMBERS, *HEAT PUMPS.

Adithya Tower # 23, V.S.N Road, Shivaji Nagar, Bengaluru - 560 051.
Ph. No. 080-22861936, 22860260 & 41238022
Email : info@fridgehouse.net ; Web Site: www. fridgehouse.net
Contact Persons : M.K. Prasad & Nagesh D Prabhu - M: 9845217197



# EDITORIAL...

I welcome you all to read and enjoy one more edition of Bhruguvani i.e., January -March 2025 issue. The last 3 months have been eventful in Balaga with lots of activities. We also cherish the accolades you have been sending on the quality & variety in articles, paper, and overall presentation. All your wishes go to our editorial team where each one has devoted his time voluntarily with passion and discipline.

I am happy to inform, that our Advertisers are receiving support and encouragement from our members. We continue to have our advertisement tariff very competitively priced to help our sponsoring members. We will devote 2 more pages to advertisements with increased pages of magazine and solicit your advertisements.

In this issue we have articles like **"Sandarshana" with Sri Sri Sri Vishwa Prasanna Swamiji,** importance of our festivals, Dakke bali - a ritual of our native, short story and many more interesting ones . About 9 months back we solicited articles from members and there was a flood of articles which could be accommodated in forthcoming issues. Now I request members to send your articles for future issues. Develop writing habits to help you streamline the thought process in a logical manner which helps you in life.

What we are today, or our identity is what we possess in culture, spiritual, wisdom and academics. Organizations like Ananda Balaga, conducting 13 programs a year teaches us to be a complete person. It is the responsibility of parents to pass on the baton of our culture, religious practices & our rituals to future generations. Children observe and learn from what their parents practice, behave, and teach.

I would like to narrate the story of one Mr. Sadashiva who dreamed of making his 3 sons cricketers, for which he acted. In his house every room was posted with posters of famous cricketers. He put his 3 boys for coaching and used to take them watch cricket tournaments and matches. He took his sons to meet successful cricketers and built passion in them to become cricketers. His 2 children grew and played for the state and the organization they worked, the youngest played for the nation. What I mean to say is our children learn from the environment to which they are exposed. Parents, have a dream for their children, make them grow in an environment that is culturally strong with sufficient religious teaching and academics. Build healthy child and healthy society.

Forthcoming months from April to June is the time when nature relaxes. It is the time of festivities in temples, religious activities, weddings and function. It is also time when children write their exams, have their holidays and families go on tour. It is time when plants grow with new leaves, flower and grows fruits. Enjoy the season when nature is at its best. Celebrate “Ugadi & Vishu Kani” the Hindu new year wearing new dress, visiting temple and your near and dear ones.

**M. Krishna Prasad**

# ಸಂತೋಷ ಸಂಭ್ರಮದ
# ವಸಂತೋತ್ಸವದ ಆಚರಣೆ

ಪ್ರಿಯ ಸದಸ್ಯ ಬಾಂಧವರೇ,

ನಮ್ಮ ಆನಂದ ಬಳಗವು ಕಳೆದ ಕೆಲವಾರು ವರ್ಷಗಳಿಂದ ಪ್ರತಿವರುಷವೂ
**ವಸಂತೋತ್ಸವ ಸಂಭ್ರಮದ ಆಚರಣೆಯನ್ನು**
ನಡೆಸುತ್ತಾ ಬಂದಿರುತ್ತದೆ.
ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು, ಸಕ್ರಿಯವಾಗಿ ವಸಂತ ಸಂಭ್ರಮದ ಪೂಜೆಯಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿರುತ್ತಾರೆ.

ಈ ವರುಷದ ವಸಂತೋತ್ಸವವು ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ಮತ್ತು ಇತರ ವಿಭಾಗಗಳ ಸಹಯೋಗದಲ್ಲಿ ದಿನಾಂಕ 11.05.2025 ಭಾನುವಾರ ಸಂಜೆ ಸಮಯ 4:00 ರಿಂದ ಪ್ರಾರಂಭವಾಗಲಿದೆ.

ಸ್ಥಳ : **ಆನಂದ ಸಭಾಗೃಹ,** ಬನ್ನೇರುಘಟ್ಟ ರಸ್ತೆ, ಬೆಂಗಳೂರು.

## ಸಾಂಸ್ಕೃತಿಕ ಕಾರ್ಯಕ್ರಮ

### ಅಮೋಘ ವಸಂತಗಾನ ವೈಭವ

ಸಂಗೀತ ವಿದ್ವಾನ್ ಶ್ರೀ ಕೆ.ವಿ. ಕೃಷ್ಣ ಪ್ರಸಾದ್ ರವರ ಶಿಷ್ಯರಾದ
**ಶ್ರೀಯುತ ತೇಜಸ್ ದತ್ ಮತ್ತು ಶ್ರೀಮತಿ ಸಿಂಧು ಭಟ್** ತಂಡದಿಂದ

ಮುಖ್ಯ ಅತಿಥಿಗಳಾಗಿ ಬರುವವರು:

**ವಿದ್ವಾನ್ ಡಾ. ವೇಣುಗೋಪಾಲ ಎಸ್. ಅಗ್ನಿಹೋತ್ರಿ**
ಸಂಪರ್ಕಾಧಿಕಾರಿ, ಪೂರ್ಣ ಪ್ರಜ್ಞ ವಿದ್ಯಾಪೀಠ
ಬೆಂಗಳೂರು.

ಸಹೃದಯ ಸದಸ್ಯ ಮಿತ್ರರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಈ ವಿಶೇಷ ಮತ್ತು ವಸಂತ ಸಂತಸ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕಾಗಿ ವಿನಂತಿ.

---

**ವಿ. ಸೂ :– ಸಾಂಸ್ಕೃತಿಕ, ಸಭಾ ಹಾಗೂ ಪೂಜಾ ಕಾರ್ಯಕ್ರಮದ ಬಳಿಕ ವಿಶೇಷ ಫಲಹಾರ ಭೋಜನದ ವ್ಯವಸ್ಥೆಯನ್ನು ಮಾಡಲಾಗಿದೆ.**

---

**ಬಾ ರಾಮಚಂದ್ರ ಉಪಾಧ್ಯ**
ಅಧ್ಯಕ್ಷರು
ಆನಂದ ಬಳಗ

**ಟಿ ಎಸ್.ನಾಗರಾಜ ಉಪಾಧ್ಯಾಯ**
ಸಂಚಾಲಕರು
ಸಾಂಸ್ಕೃತಿಕ ವಿಭಾಗ
ಆನಂದ ಬಳಗ

**ಸತ್ಯನಾರಾಯಣ ಭಟ್**
ಕಾರ್ಯದರ್ಶಿ
ಆನಂದ ಬಳಗ

## ಬೃಹತ್ ಪ್ರಮಾಣದಲ್ಲಿ ಸದಸ್ಯರನ್ನು ಸಂಘಟಿಸಿರುವುದೇ

# ಆನಂದ ಬಳಗದ ಮಹಾನ್ ಸಾಧನೆ

**- ಶ್ರೀ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು**

ಆನಂದ ಬಳಗ ಪೇಜಾವರ ಮಠಾಧೀಶರಾಗಿದ್ದ ಕೀರ್ತಿ ಶೇಷ ವಿಶ್ವೇಶ ತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಆರಂಭಗೊಂಡಿದ್ದು, ಪೂಜ್ಯರ ಹಾಗೂ ಅವರ ಪರಮಾಪ್ತ ಶಿಷ್ಯ ಶ್ರೀ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರ ಅನುಗ್ರಹದ ಆಶ್ರಯದಲ್ಲಿ ಬೆಳೆಯುತ್ತಿರುವ ಸಂಸ್ಥೆ. ಬಳಗದ ಸದಸ್ಯ ಸಮುದಾಯಕ್ಕೆ ಶ್ರೀ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥರ ಹಿತನುಡಿಗಳು ಹಾಗೂ ಮಾರ್ಗದರ್ಶನವನ್ನು ಪಡೆಯುವ ಹಂಬಲದಿಂದ ಭೃಗುವಾಣಿಯ ಸಂಪಾದಕ ಎಂ. ಕೃಷ್ಣ ಪ್ರಸಾದ್, ಉಪಾಧ್ಯಕ್ಷರಾದ ಕೆ.ಎನ್. ಅಡಿಗ ಮತ್ತು ಕೋಶಾಧಿಕಾರಿ ಕೆ. ಗೋಪಾಲಕೃಷ್ಣ ಕುಂಜತ್ತಾಯರವರು ದಿನಾಂಕ 12.3.2025ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಸ್ವಾಮೀಜಿಯವರೊಂದಿಗೆ ನಡೆಸಿದ ಸಂದರ್ಶನದ ಉದ್ಧೃತ ಭಾಗಗಳನ್ನು ಇಲ್ಲಿ ನೀಡಲಾಗಿದೆ – ಸಂ.

**ಭೃ.ವಾ. :** ಪರಮಪೂಜ್ಯ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಆನಂದಬಳಗ ತಮಗೆ ಹೊಸದೇನಲ್ಲ. 1988ರಲ್ಲಿ ತಮ್ಮ ಗುರುಗಳು ಆರಂಭಿಸಿ, ಅನುಗ್ರಹಿಸಿದ ಬಳಗ ಈಗ ಹೆಮ್ಮರವಾಗಿ ಬೆಳೆದಿದೆ. ಇಂದು ಸುಮಾರು 2500 ಸದಸ್ಯರಿದ್ದು, ಅವರ ಕುಟುಂಬ ವರ್ಗದವರೂ ಸೇರಿದರೆ, 10 ಸಾವಿರಕ್ಕಿಂತಲೂ ಹೆಚ್ಚು ಜನ ಬಲವುಳ್ಳ ಸಂಘಟನೆಯಾಗಿದೆ. ಬಳಗದಲ್ಲಿ ವಿವಿಧ ಉಪ ವಿಭಾಗಗಳಿದ್ದು, ವರ್ಷಪೂರ್ತಿ ಹಲವಾರು ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಇದೆ. ಬಳಗದ ಮಹಿಳಾ ವಿಭಾಗ ಕಳೆದ 25 ವರ್ಷಗಳಿಂದ ನಡೆಸುತ್ತಾ ಬಂದಿರುವ ವಧು-ವರಾನ್ವೇಷಣೆ ಜನಪ್ರಿಯವಾಗಿದೆ. ಬಳಗವು ಪೇಜಾವರ ಮಠ ಮತ್ತು ವಿದ್ಯಾಪೀಠದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದು, ಬಳಗದ ತ್ರೈಮಾಸಿಕ ಪತ್ರಿಕೆ 'ಭೃಗುವಾಣಿ'ಗಾಗಿ ತಮ್ಮ ಜೊತೆ ಕೆಲವೊಂದು ವಿಚಾರಗಳನ್ನು ಪ್ರಸ್ತಾಪಿಸಿ, ತಮ್ಮ ಹಿತೋಕ್ತಿಗಳನ್ನು ಪಡೆಯುವ ಬಯಕೆ ನಮ್ಮದು. ಇದಕ್ಕಾಗಿ ಈ ಪುಟ್ಟ ಸಂದರ್ಶನ.

**ಸ್ವಾಮೀಜಿ :** ಬಹಳ ಸಂತೋಷ, ಆನಂದ ಬಳಗ ಆರಂಭವಾದ ವರ್ಷ ಅಂದರೆ 1988. ನಾವು ಸನ್ಯಾಸ ದೀಕ್ಷೆ ತೆಗೆದುಕೊಂಡಿರುವ ವರ್ಷ. ಆದುದರಿಂದ ಬಳಗ ಮತ್ತು ನಾವು ಸಹೋದರರು ಇದ್ದ ಹಾಗೆ. ಅಂದಿನಿಂದ ಇಂದಿನವರೆಗೆ ನಾವು ಮತ್ತು ಬಳಗ ಜೊತೆ ಜೊತೆಯಾಗಿ ನಡೆದುಕೊಂಡು ಬರುತ್ತಿದ್ದೇವೆ.



**ಭೃ.ವಾ. :** ಪೂಜ್ಯ ಹಿರಿಯ ಶ್ರೀಗಳು ಕಾಲವಾದ ನಂತರ ತಮ್ಮ ಕಾರ್ಯಕ್ಷೇತ್ರವನ್ನು ಬಹಳಷ್ಟು ವಿಸ್ತರಿಸಿಕೊಂಡು, ಇಂದು ತಾವು ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ, ವಿಶ್ವಮಟ್ಟದಲ್ಲೂ ಅಪಾರ ಗೌರವ ಮತ್ತು ಮನ್ನಣೆ ಪಡೆದಿರುವುದು ನಮಗೆಲ್ಲಾ ಹೆಮ್ಮೆಯ ಸಂಗತಿ. ಈ ಕ್ಷಿಪ್ರ ಬದಲಾವಣೆಗೆ ಪ್ರೇರಣೆ ಯಾರು? ಏನು?

**ಸ್ವಾಮೀಜಿ :** ಇದಕ್ಕೆಲ್ಲಾ ಮೂಲ ಪ್ರೇರಣೆ ನಮ್ಮ ಗುರುಗಳು. ನಮ್ಮ ಸನ್ಯಾಸ ದೀಕ್ಷೆಯ ನಂತರ ಗುರುಗಳ ಜೊತೆ ಒಡನಾಟ, ಅವರ ದೂರದರ್ಶಿತ್ವ, ಸರ್ವರೊಂದಿಗೆ ಇರುವ ಭ್ರಾತೃತ್ವ, ಧಾರ್ಮಿಕ ಚಿಂತನೆ, ಬೋಧನೆ ಮತ್ತು ಆಚರಣೆಗಳೇ ನಮ್ಮ ಬೆಳವಣಿಗೆಗೆ, ನಡೆ–ನುಡಿಗಳಿಗೆ ಪ್ರೇರಣೆ. ಅವರೇ ನಮಗೆ ಆದರ್ಶ.

**ಭೃ.ವಾ :** ಅಯೋಧ್ಯೆಯಲ್ಲಿ ಶ್ರೀರಾಮ ಪ್ರತಿಷ್ಠಾಪನೆಗಾಗಿ ನಾವು ನಡೆಸಿದ 500 ವರ್ಷಗಳ ಶ್ರಮಕ್ಕೆ ಫಲ ಲಭಿಸಿದೆ. ತಾವು ಶ್ರೀ ರಾಮ ಪ್ರತಿಷ್ಠಾಪನೆಯ ಪುಣ್ಯ ಕಾರ್ಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದು, ಈ ಪುಣ್ಯ ಕಾರ್ಯದ ಅನುಭವ ಹೇಗಿತ್ತು...?

**ಸ್ವಾಮೀಜಿ :** ಶ್ರೀರಾಮ ಜನ್ಮಭೂಮಿ ವಿಶ್ವಸ್ಥ ಮಂಡಳಿಯ ಸದಸ್ಯರಾಗಿ ರಾಮಮಂದಿರ ನಿರ್ಮಾಣದ ಆಗುಹೋಗುಗಳ ಜವಾಬ್ದಾರಿಯನ್ನು ಎಲ್ಲಾ ಪೀಠಾಧಿಪತಿಗಳ, ಸಾಧು ಸಂತರ ಪ್ರತಿನಿಧಿಯಾಗಿ ನಿರ್ವಹಿಸುವ ಯೋಗ ಬಂದಿತ್ತು. ಶ್ರೀರಾಮನ ವಿಗ್ರಹ ಪ್ರತಿಷ್ಠಾಪನೆ, ಮುಂದೆ 48 ದಿನಗಳ ಕಾಲ ವಿದ್ಯುಕ್ತವಾಗಿ ಮಂಡಲ ಪೂಜೆ ಮಾಡುವ ಭಾಗ್ಯ ಬಂದಿರುವುದು ಗುರುಗಳು, ಶ್ರೀಕೃಷ್ಣ, ಪ್ರಾಣದೇವರು ಮತ್ತು ಶ್ರೀ ರಾಮದೇವರ ಅನುಗ್ರಹ ಎನ್ನಲೇಬೇಕು. ಅಯೋಧ್ಯೆಯ ರಾಮ ಮಂದಿರಕ್ಕೆ ಕರ್ನಾಟಕದ ಕೊಡುಗೆ ಗಣನೀಯವಾಗಿದೆ. ಮೂರ್ತಿಗೆ ಬಳಸಿದ ಶಿಲೆ ಕರ್ನಾಟಕದ್ದು, ಶಿಲ್ಪಿ ಕರ್ನಾಟಕದವರು, ಮೇಲ್ವಿಚಾರಣೆ ಮಾಡಿದವರು ನಮ್ಮ ರಾಜ್ಯದವರು. ರಾಮ ದೇವರ ಪ್ರತಿಮೆಯಂತೂ ಅತ್ಯಂತ ಸುಂದರವಾಗಿದ್ದು, ಭಕ್ತವೃಂದವನ್ನು ಪ್ರೀತಿಯಿಂದ ಗಮನಿಸಿದ ಹಾಗೆ ಇರುವ ಕಣ್ಣಿನ ನೋಟದಿಂದಾಗಿ ರಾಮ ದೇವರೇ ಅಯೋಧ್ಯೆಗೆ ಬಂದಿದ್ದಾರೋ ಅನ್ನಿಸುವಂತಿದೆ.

> "ಅಯೋಧ್ಯೆಯ ಬಾಲರಾಮನ ಪ್ರತಿಮೆ ಅತ್ಯಂತ ಸುಂದರವಾಗಿದ್ದು, ಭಕ್ತವೃಂದವನ್ನು ಪ್ರೀತಿಯಿಂದ ಗಮನಿಸುತ್ತಿರುವ ಹಾಗೆ ಇರುವ ಕಣ್ಣ ನೋಟದಿಂದಾಗಿ ರಾಮದೇವರೇ ಅಯೋಧ್ಯೆಗೆ ಬಂದಿದ್ದಾರೋ ಅನ್ನಿಸುವಂತಿದೆ."

**ಭೃ.ವಾ. :** ಪೇಜಾವರ ಮಠ ಅನೇಕ ಸಾಮಾಜಿಕ, ಧಾರ್ಮಿಕ, ಆರೋಗ್ಯ ಕ್ಷೇತ್ರಗಳಲ್ಲಿ ಅಪಾರ ಸೇವೆಯನ್ನು ಮಾಡುತ್ತಿದ್ದರೂ ನಮ್ಮವರಿಗೆ ಅನುಕೂಲವಾಗಬಲ್ಲ ವೃತ್ತಿಪರ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಈ ಕೊರತೆಯನ್ನು ನೀಗಿಸಲು ಯೋಜನೆಗಳೇನಾದರೂ ಇದೆಯಾ...?

**ಸ್ವಾಮೀಜಿ :** ನಮ್ಮ ಗುರುಗಳು ಕೆಲವು ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದರೂ, ಅದಕ್ಕೆ ಸಮಾಜದ ಪ್ರೋತ್ಸಾಹದ ಕೊರತೆಯಿಂದಾಗಿ ಹಾಗೂ ಇನ್ನಿತರ ಕಾರಣಗಳಿಂದಾಗಿ ವಿದ್ಯಾಸಂಸ್ಥೆಗಳನ್ನು ನಡೆಸುವುದು ಸಾಧ್ಯವೇ ಇಲ್ಲವೆಂದಾಗ ವಿದ್ಯಾರ್ಥಿಗಳ ಹಿತದೃಷ್ಟಿಯಲ್ಲಿ ಬೇರೆಯವರಿಗೆ ಹಸ್ತಾಂತರಿಸುವುದು ಅನಿವಾರ್ಯವಾಯಿತು. ಇನ್ನೊಂದು ಸಂಗತಿ ಎಂದರೆ ಮಠದವರು ನಡೆಸುವಾಗ ಎಲ್ಲವೂ ಉಚಿತವಾಗಿ ಲಭ್ಯವಾಗಬೇಕೆಂಬ ನಿರೀಕ್ಷೆಯೂ ಹೆಚ್ಚಾಗಿರುತ್ತದೆ.

**ಭೃ.ವಾ :** ಪೇಜಾವರ ಮಠದ ಆಶ್ರಯದಲ್ಲಿ ಹಲವಾರು ವಿದ್ಯಾರ್ಥಿ ನಿಲಯಗಳು, ಛತ್ರಗಳು ಈಗಲೂ ಕಾರ್ಯನಿರ್ವಹಿಸುತ್ತಿದ್ದು ಜನರಿಗೆ ಬಹಳಷ್ಟು ಉಪಯೋಗವಾಗುತ್ತಿವೆ... ಈ ಬಗ್ಗೆ ತುಸು ವಿವರ...

ಪೇಜಾವರ ಮಠ ಅಷ್ಟೊಂದು ಶ್ರೀಮಂತ ಮಠವಲ್ಲ, ಹಳೆಯ ತತ್ವವಾದ ಪತ್ರಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. 25 ಪೈಸೆ, 35 ಪೈಸೆ ಹೀಗೆ ದೇಣಿಗೆ ಸಂಗ್ರಹ ಮಾಡಿ ಪೂರ್ಣಪ್ರಜ್ಞ ವಿದ್ಯಾಪೀಠವೂ ಸೇರಿದಂತೆ ಅನೇಕ ವಿದ್ಯಾಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ನಮ್ಮ ಸಂಸ್ಕೃತಿ, ಧಾರ್ಮಿಕ ಅಧ್ಯಯನ, ಆಧ್ಯಾತ್ಮದ ವಿಚಾರದಲ್ಲಿ ಅಭಿರುಚಿ ಇರುವ ವಿದ್ಯಾರ್ಥಿಗಳಿಗೆ ಊಟ, ವಸತಿಗೆ ತೊಂದರೆಯಾಗಬಾರದೆಂಬ ಇರಾದೆಯಿಂದ ಪ್ರಾರಂಭಿಸಿರುವ ಆರು ವಿದ್ಯಾರ್ಥಿ ನಿಲಯಗಳು ಇಂದೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ ದೇಶದ ಎಲ್ಲಾ ಯಾತ್ರಾ ಕ್ಷೇತ್ರಗಳಲ್ಲಿ ಛತ್ರಗಳನ್ನು ನಿರ್ಮಿಸಿದ್ದು, ಯಾತ್ರಾರ್ಥಿಗಳು ಇದರ ಸದುಪಯೋಗವನ್ನು ಪಡೆಯುತ್ತಿದ್ದಾರೆ. ಉತ್ತಮ ಗುಣಮಟ್ಟದ ಆರೋಗ್ಯ ಸೌಲಭ್ಯವು ಜನಸಾಮಾನ್ಯರ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕೆನ್ನುವ ಗುರುಗಳ ಸಂಕಲ್ಪದಂತೆ ಮಾರ್ತಹಳ್ಳಿಯಲ್ಲಿ ಸುಸಜ್ಜಿತ ಆಸ್ಪತ್ರೆ ಇತ್ತೀಚೆಗೆ ಪ್ರಾರಂಭವಾಗಿದೆ. ಇದಲ್ಲದೆ ಜಯನಗರದ ಆಸ್ಪತ್ರೆ ಕೂಡಾ ಬಡವರಿಗೆ ವರದಾನವಾಗಿದೆ. ಉಡುಪಿಯ ರಥ ಬೀದಿಯಲ್ಲಿ ಉಚಿತ ಚಿಕಿತ್ಸಾಲಯ ಕಳೆದ ಆರು

ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ಜನರು ಇದರ ಉಪಯೋಗ ಪಡೆಯುತ್ತಿದ್ದಾರೆ.

**ಭೃ.ವಾ :** ಗೋಸೇವೆ ತಮಗೆ ಅತ್ಯಂತ ಆಪ್ತವಾದ ವಿಚಾರ. ಆದರೆ ಗೋಶಾಲೆಯ ನಿರ್ವಹಣೆ ಅಷ್ಟೇ ಸವಾಲಿನ ಕೆಲಸ. ಈ ಪುಣ್ಯ ಕಾರ್ಯದಲ್ಲಿ ಜನರ ಸ್ಪಂದನೆ ಹೇಗಿದೆ ಗುರುಗಳೇ...?

**ಸ್ವಾಮೀಜಿ :** ಮಠವು ನಾಲ್ಕು ಗೋಶಾಲೆಗಳನ್ನು ನಡೆಸುತ್ತಿದ್ದು, ಸುಮಾರು ಎರಡು ಸಾವಿರ ಗೋವುಗಳ ನಿರ್ವಹಣೆ ಸುಲಭದ ಕೆಲಸವಲ್ಲ. ಮಠದ ಎಲ್ಲಾ ಕಾರ್ಯಗಳು ಜನರ ಸಹಕಾರದಿಂದಲೇ ನಡೆಯಬೇಕಾಗಿದೆ. ದೇವರ ಅನುಗ್ರಹದಿಂದ ನಡೆಯುತ್ತಾ ಇದೆ. ಬೆಂಗಳೂರಿನಲ್ಲೂ ಗೋಶಾಲೆ ಮಾಡಬೇಕೆಂಬ ಬೇಡಿಕೆ ಇದೆ. ಆದರೆ ಇಲ್ಲಿ ಜಾಗ ಸಿಗುವುದೇ ಕಷ್ಟ. ಸೂಕ್ತ ಜಾಗ ಸಿಕ್ಕಿದರೆ ತಕ್ಷಣ ಗೋಶಾಲೆ ಆರಂಭಿಸಲು ಮಠವು ತಯಾರಾಗಿದೆ.

**ಭೃ.ವಾ :** ನಮ್ಮ ಯುವಜನರು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಂದ ದೂರವಾಗುತ್ತಾ ಇದ್ದಾರೆ ಎಂದು ಎಲ್ಲರ ಕಳವಳ. ಅವರನ್ನು ಹತ್ತಿರ ತರುವುದಾದರೂ ಹೇಗೆ ?

**ಸ್ವಾಮೀಜಿ :** ಈ ವಿಚಾರ ನಿಜವಾದರೂ ಕಳವಳ ಪಡುವಷ್ಟು ಯುವಜನರು ದೂರಹೋಗಿಲ್ಲ. ನಮ್ಮ ಹಿರಿಯರು ಧಾರ್ಮಿಕ ಆಚಾರ–ವಿಚಾರಗಳಲ್ಲಿ ತುಂಬಾ ಮುಂದಿದ್ದರು. ನಾವು ಈಗ ಅವರಿಗಿಂತ ನಾಲ್ಕು ಹೆಜ್ಜೆ ಹಿಂದೆ ಹೋಗಿದ್ದೇವೆ. ಯುವಜನರು ಇನ್ನೂ ನಾಲ್ಕು ಹೆಜ್ಜೆ ಹಿಂದೆ ಸರಿಯುತ್ತಿದ್ದಾರೆ. ಆನಂದ ಬಳಗದಂತಹ ಸಂಘಟನೆಗಳು ಈ ನಿಟ್ಟಿನಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಯುವ ಜನರನ್ನು ಧಾರ್ಮಿಕ ಆಚಾರ ವಿಚಾರಗಳಿಗೆ ಆಕರ್ಷಿಸುವ ಕೆಲಸ ಮಾಡುವ ಸಂದರ್ಭದಲ್ಲಿ ಸಂಸ್ಥೆಗಳು ನಮಗೆ ತಿಳಿಸಿದರೆ ನಾವು ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗಬಹುದು. ಈ ದೃಷ್ಟಿಯಿಂದಲೇ ಧಾರ್ಮಿಕ ಶಿಬಿರಗಳನ್ನು ನಡೆಸುತ್ತಾ ಇದ್ದೇವೆ. ಎಲ್ಲಾ ವಯೋಮಾನದವರಿಗೆ ಮಾತ್ರವಲ್ಲ, ಮಹಿಳೆಯರಿಗೂ ಕೂಡ ಸರಿ ಹೊಂದುವ ವಿವಿಧ ಕಾಲಾವಧಿಯ ಶಿಬಿರಗಳು ಬೇರೆ ಬೇರೆ ಸ್ಥಳಗಳಲ್ಲಿ ನಡೆಸುತ್ತಾ ಇವೆ. ಇದಲ್ಲದೆ ಆನ್‌ಲೈನ್ ಮೂಲಕ ಕೂಡಾ ಶಿಕ್ಷಣವನ್ನು ವಿದ್ಯಾಪೀಠ ನೀಡುತ್ತಿದೆ. ಮಠದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ವಾಂಸರು ಲಭ್ಯವಿದ್ದಾರೆ. ಅವರ ವಿದ್ವತ್ತಿನ ಸದುಪಯೋಗವನ್ನು ಸಮಾಜ ವಿಶೇಷವಾಗಿ ಯುವ ಜನರು ಪಡೆಯುವುದು ಅಪೇಕ್ಷಣೀಯವಾಗಿದೆ.

> **"ಯುವ ಜನರು ಇಂದು ಧಾರ್ಮಿಕ ಆಚಾರ–ವಿಚಾರಗಳಿಂದ ದೂರ ಸರಿಯುತ್ತಿರುವುದು ನಿಜವಾದರೂ ನಾವು ಕಳವಳಪಡುವಷ್ಟು ದೂರ ಹೋಗಿಲ್ಲ.. ಆದರೆ ಅವರನ್ನು ಹತ್ತಿರ ತರುವುದು ನಮ್ಮೆಲ್ಲರ ಜವಾಬ್ದಾರಿ."**

**ಭೃ.ವಾ. :** ಮಠದ ಸತ್ಕಾರ್ಯಗಳಲ್ಲಿ ಆನಂದ ಬಳಗ ಹೇಗೆ ಸಕ್ರಿಯವಾಗಿ ತೊಡಗಿಸಿಕೊಳ್ಳ ಬಹುದು?

**ಸ್ವಾಮೀಜಿ :** ನಮ್ಮ ಕಾರ್ಯಚಟುವಟಿಕೆಗಳು ಹೆಚ್ಚಿನ ಜನರಿಗೆ ತಲುಪುವಂತಾಗಬೇಕು. ಹೆಚ್ಚಿನ ಕಾರ್ಯಕರ್ತರು ಬರಬೇಕು. ಮಠದ ಜೊತೆ ಕೈಗೂಡಿಸಬೇಕು. ಈ ಕೆಲಸದಲ್ಲಿ ಆನಂದಬಳಗ ಪ್ರಯತ್ನಿಸಬಹುದು. ಇದರಿಂದಾಗಿ ಸಮಾಜದಲ್ಲಿ ಬದಲಾವಣೆ ಸಾಧ್ಯವಾಗಲಿದೆ.

**ಭೃ.ವಾ :** ಸಂದರ್ಶನ ಮುಗಿಸುವ ಮುನ್ನ ಗುರುಗಳೇ ಆನಂದ ಬಳಗಕ್ಕೆ ಮತ್ತು ಸದಸ್ಯರಿಗೆ ತಮ್ಮ ಹಿತೋಕ್ತಿಗಳೇನು?

**ಸ್ವಾಮೀಜಿ :** ಬಳಗವು ಮಾಡುತ್ತಿರುವ ಸಂಘಟನಾ ಕಾರ್ಯ ಬಹಳ ಶ್ರೇಷ್ಠವಾದುದು. 2500 ಸದಸ್ಯರನ್ನು, ಅವರ ಕುಟುಂಬದವರನ್ನು ಒಟ್ಟಾಗಿ ಸೇರಿಸುವುದು ಸಣ್ಣ ಮಾತಲ್ಲ. ಈ ಸತ್ಕಾರ್ಯ ಇನ್ನೂ ಹೆಚ್ಚಿನ ರೀತಿಯಲ್ಲಿ ಮುಂದುವರಿಯಲಿ... ಯುವ ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕಾರ್ಯವನ್ನು ಬಳಗದ ಹಿರಿಯರು, ತಮ್ಮ ಅನುಭವದ ಆಧಾರದಲ್ಲಿ ಮಾಡುತ್ತಿರಬೇಕು. ಸದಸ್ಯರನ್ನು ಒಟ್ಟುಗೂಡಿಸಿ, ವಿಚಾರ–ಮಂಥನಗಳು ನಡೆಸುತ್ತಿರಬೇಕು. ಇಂತಹ ಸಂದರ್ಭಗಳಲ್ಲಿ ನಮ್ಮನ್ನು ಆಹ್ವಾನಿಸಿ ಸದಸ್ಯರಿಗೆ ಇರಬಹುದಾದ ಸಂಶಯ, ಗೊಂದಲಗಳಿಗೆ ಪರಿಹಾರೋಪಾಯಗಳನ್ನು ಜೊತೆಯಾಗಿ ಹುಡುಕೋಣ. ಇದು ಬಳಗದ ಜವಾಬ್ದಾರಿ ಹಾಗೂ ನಮ್ಮ ಕರ್ತವ್ಯ.

**ಭೃ.ವಾ :** ಸ್ವಾಮೀಜಿ, ತಮ್ಮ ಬಿಡುವಿರದ ಕಾರ್ಯ ಚಟುವಟಿಕೆಗಳ ಮಧ್ಯೆಯೂ ತಮ್ಮ ಅಮೂಲ್ಯವಾದ ಸಮಯವನ್ನು ನಮ್ಮ ಜೊತೆ ಕಳೆದಿರುವುದು ಬಳಗದ ಸುಯೋಗ. ಇದಕ್ಕಾಗಿ ಭಕ್ತಿಪೂರ್ವಕ ನಮನಗಳು.

> **ಬಳಗದ ಸದಸ್ಯರನ್ನು ಒಟ್ಟುಗೂಡಿಸಿ ಆಗಾಗ ವಿಚಾರ ಮಂಥನಗಳು ನಡೆಸುತ್ತಿರಬೇಕು. ಇಂತಹ ಸಂದರ್ಭಗಳಲ್ಲಿ ನಮ್ಮನ್ನು ಆಹ್ವಾನಿಸಿದರೆ, ಸದಸ್ಯರಿಗೆ ಇರಬಹುದಾದ ಸಂಶಯ, ಗೊಂದಲಗಳಿಗೆ ಪರಿಹಾರೋಪಾಯಗಳನ್ನು ಜೊತೆಯಾಗಿ ಹುಡುಕಬಹುದು. ಇದು ಬಳಗದ ಜವಾಬ್ದಾರಿ... ನಮ್ಮ ಕರ್ತವ್ಯ.**
>
> **– ಸ್ವಾಮೀಜಿ**

# ಆನಂದ ಮಿಲನ - 2025



"ಆನಂದ ಮಿಲನ–2025" ವಾರ್ಷಿಕ ಕಾರ್ಯಕ್ರಮ ದಿನಾಂಕ 04.01.2025ರಂದು ರೇಣುಕಾಚಾರ್ಯ ಆಡಿಟೋರಿಯಂನಲ್ಲಿ ಅದ್ದೂರಿಯಾಗಿ ನಡೆಯಿತು. ಸುಮಾರು 450 ಪ್ರೇಕ್ಷಕರು ಈ ಕಾರ್ಯಕ್ರಮಕ್ಕೆ ಬಂದು ಸಾಕ್ಷಿ ಆಗಿದ್ದಾರೆ ಎಂದರೆ ಬೆಂಗಳೂರು ನಗರದಲ್ಲಿ, ಸಂಘ ಸಂಸ್ಥೆಯ ರೂಪದಲ್ಲಿ ನೋಡುವುದಾದರೆ ಇದೊಂದು ಒಳ್ಳೆಯ ಜನ ಭರಿತ ಸಭೆಯ ಕಾರ್ಯಕ್ರಮ ಎಂದು ಹೇಳಬಹುದು. ಬೆಂಗಳೂರಿನಂತಹ ನಗರದ ಯಾಂತ್ರಿಕ ಜೀವನದ ದಿನಗಳಲ್ಲಿ, ಇಷ್ಟೊಂದು ಪ್ರೇಕ್ಷಕರು ಒಗ್ಗೂಡುವುದು ಹೆಮ್ಮೆಯ ವಿಷಯ ಕೂಡ.

"**ಆನಂದ ಮಿಲನ**" – ಈ ಹೆಸರೇ ಸೂಚಿಸುವಂತೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಮನುಷ್ಯತ್ವದ ದೃಷ್ಟಿಯಿಂದ ಒಬ್ಬನು ಮತ್ತೊಬ್ಬನೊಂದಿಗೆ ಸ್ನೇಹದ ಸಂಬಂಧಗಳನ್ನು ಬೆಳೆಸುವ ಒಂದು ಪ್ರಮುಖ ವೇದಿಕೆ ಎಂದು ಅರ್ಥೈಸಬಹುದು. "ಆನಂದ" ಎಂಬುದು ಸಂತೋಷವನ್ನು ಹಾಗೂ "ಮಿಲನ" ಎಂದರೆ ಒಂದುಗೂಡುವುದನ್ನು ಸೂಚಿಸುವಂತೆ, ನಮ್ಮ ಆನಂದ ಬಳಗದ ಪ್ರತೀ ವರ್ಷದ ಪರಿಕಲ್ಪನೆ, ಆನಂದ ಮಿಲನ ಕೂಡ ಆನಂದ ಮತ್ತು ಸಂತೋಷವನ್ನು ಹಂಚಿಕೊಳ್ಳುವ, ಪರಸ್ಪರ ಸಹಕಾರ, ಸ್ನೇಹ ಮತ್ತು ಏಕತೆಯನ್ನು ಉತ್ತೇಜಿಸುವ ಪ್ರಕ್ರಿಯೆ ಹಾಗೂ ವೇದಿಕೆ ಎಂಬುದರಲ್ಲಿ ಸಂಶಯವಿಲ್ಲ.

ಈ ಕಾರ್ಯಕ್ರಮದ ಬಗ್ಗೆ ಕಿಂಚಿತ್ ಹೇಳುವುದಾದರೆ, ಒಟ್ಟಾರೆ ಒಂದು ಒಳ್ಳೆಯ ಕಾರ್ಯಕ್ರಮ. ಸಮಯಕ್ಕೆ ಸರಿಯಾಗಿ ಸದಸ್ಯರು/ಪ್ರೇಕ್ಷಕರು ಸಭಾ ಭವನದಲ್ಲಿ ಬಂದು ಶಾಂತ ರೀತಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಗಣ್ಯರು ತಮ್ಮ ಸುಂದರ ಅನುಭವದ ನುಡಿಗಳಿಂದ ಎಲ್ಲರಿಗೂ ಆನಂದ ಬಳಗದ ಶಕ್ತಿ ಏನೆಂದು ಸೂಕ್ಷ್ಮವಾಗಿ ತಿಳಿಸಿದರು. ಶ್ರೀಕಾಂತ್ ಅವರ ಪ್ರಾರ್ಥನೆಯಿಂದ ಮೊದಲುಗೊಂಡು, ಡಾ. ವಿಜಯ್ ಕುಮಾರ್ ಅವರ ಹಾಡುಗಳು, Dafodil Team ಅವರ ಅದ್ಭುತ ನೃತ್ಯ, ಮತ್ತೊಮ್ಮೆ ಶ್ರೀಕಾಂತ್ ಅವರ ಕನ್ನಡ & ಹಿಂದಿ ಹಾಡುಗಳು ಜನರನ್ನು ಮನರಂಜಿಸಿತು. ಜುಗಲ್ ಬಂಧಿಯಲ್ಲಿ ಮೂಡಿ ಬಂದ Semi Classical & Contemporary ನೃತ್ಯ ಸಂಯೋಜನೆ ಅವರ ಅದೆಷ್ಟೋ ದಿನದ ರಿಹರ್ಸಲ್ ಮತ್ತು ಪ್ರಯತ್ನ, ಎಲ್ಲಾ ಪ್ರೇಕ್ಷಕ ವರ್ಗವನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ಮತ್ತೆ ಮೂಡಿ ಬಂದ 'ಸೀರೆಯಲ್ಲಿ ನೀರೆಯರು', 25 ಮಹಿಳೆಯರ ಸಾಂಪ್ರದಾಯಿಕ, ಸಮಕಾಲೀನ, ಭವಿಷ್ಯದ ಪರಿಕಲ್ಪನೆಯ ಉಡುಗೆ ತೊಡುಗೆ/ ವಸ್ತ್ರಾಲಂಕಾರದ ಅಬ್ಬರದ 'ವಯ್ಯಾರದ ನಡಿಗೆ' ಇಡೀ ಸಭಾಭವನವನ್ನು ಮೂಕ ಪ್ರೇಕ್ಷಕರಾಗಿ ವೀಕ್ಷಿಸುವಂತೆ ಮಾಡಿತು. Show Stopper Ananya, Choreographer Roopa Pejathaya, ಅವರ ಅನುಭವ ಮತ್ತು ಹೃದಯಪೂರ್ವಕ ಪ್ರಯತ್ನ ಖಂಡಿತವಾಗಿ ಕಾರ್ಯಕ್ರಮದುದ್ದಕ್ಕೂ ಚಪ್ಪಾಳೆ ಹಾಗೂ whistle ನಲ್ಲಿ ಮೂಡಿ ಬಂದಿದ್ದು ಪ್ರಶಂಸನೀಯ.



ರಘುವೀರ್ ರಾವ್

ಮತ್ತೆ ಪ್ರದರ್ಶನಗೊಂಡ ಚುಟುಕು ಕವಿ ಡುಂಡಿರಾಜ್ ಅವರು ಬರೆದ ಹಾಸ್ಯ ನಾಟಕ – 'ಪುಕ್ಕಟೆ ಸಲಹೆ' – ಪ್ರೇಕ್ಷಕರ ಮಿಶ್ರ ಪ್ರತಿಕ್ರಿಯೆಯಿಂದ ಹೊರ ಬಂದಿತು. ನಾಟಕದ ವಿಷಯ, ಕಲಾವಿದರು ಉತ್ತಮ ಇದ್ದರೂ, ಅದೇನೋ Sound System ಹಾಗೂ Dialogue Punch ವೀಕ್ಷಕರಿಗೆ ಹಿಡಿಸಲಿಲ್ಲವೋ ಅಥವಾ ಈಗಿನ Trendಗೆ ನಮ್ಮ ಬಳಗದ ಸದಸ್ಯರಿಗೆ ನಾಟಕ ಸರಿ ಹೊಂದಿಲ್ಲ ಎಂದೂ ಕಾರಣವಿರಬಹುದು. ಒಟ್ಟಾರೆ, ಮಿಶ್ರ ಪ್ರತಿಕ್ರಿಯೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಬಳಗದ ಕಾರ್ಯಕಾರಿ ಸಮಿತಿ ತಮ್ಮೊಳಗೆ ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳಲ್ಲಿ ಹೇಗೆ ಪ್ರೇಕ್ಷಕರನ್ನು ಹಿಡಿತದಲ್ಲಿ ಹಿಡಿದು ಮನೋರಂಜಿಸಬಹುದು ಎಂದು ತಮ್ಮೊಳಗೆ ವಿಮರ್ಶೆ ಮಾಡಿದರೆ ಉತ್ತಮ.

ಕಾರ್ಯಕ್ರಮದ ಸಂಯೋಜನೆ ಡಾ. ವೀಣಾ ಶರತ್ ನಿರ್ವಹಿಸಿದ್ದರು. ಸಂಚಾಲಕರಾದ ಶ್ರೀ ಗುರುರಾಜ ಪೇಜಾವರ ರವರು ಸಮಿತಿ ಹಾಗೂ ಸದಸ್ಯರ ಸಹಾಯದೊಂದಿಗೆ ಅತ್ಯುತ್ತಮವಾಗಿ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಕಾರ್ಯಕ್ರಮದ ಡ್ಯಾನ್ಸ್ ಅಭ್ಯಾಸಕ್ಕೆ ಸ್ಥಳಾವಕಾಶ ಕೊಟ್ಟ ಪೂರ್ಣಿಮಾ ರೀಜೆನ್ಸಿ ಹಾಗೂ ಫ್ರೆಡ್ಸ್ ಹೌಸ್‌ನ ಮಾಲೀಕರಿಗೆ ಧನ್ಯವಾದಗಳು. ಕೊನೆಗೆ, ಉತ್ತಮ ಭೋಜನ ನಿಜಕ್ಕೂ ರುಚಿಕರವಾಗಿತ್ತು.

"ಆನಂದ ಮಿಲನ" ದ ಯಶಸ್ಸಿನ ಹಿಂದೆ ಪ್ರತಿಯೊಬ್ಬ ಸದಸ್ಯರು ದೊಡ್ಡ ಹೆಜ್ಜೆಯೊಂದಿಗೆ ತಮ್ಮ ಸಾಮಾಜಿಕ



ಜವಾಬ್ದಾರಿಯನ್ನು ಅನುಸರಿಸುತ್ತಾ ಇರುವುದು ಒಂದು ಅತೀ ಹೆಮ್ಮೆಯ ವಿಷಯ. ಕ್ರಿಯಾಶೀಲತೆಗಾಗಿ ಅತ್ಯುತ್ತಮ ವೇದಿಕೆ, ಸದಸ್ಯರೆಲ್ಲರೂ ಒಟ್ಟಾಗಿ ನಡೆಯುವ ಶಕ್ತಿ ಮತ್ತು ಬೆಂಗಳೂರಿನ ನಮ್ಮ ಪ್ರತಿಷ್ಠಿತ ಸಮುದಾಯದ ಸಂಸ್ಥೆ 'ಆನಂದ ಬಳಗ' ಇದರ ಗೌರವವನ್ನು ಪ್ರತಿಪಾದಿಸುತ್ತದೆ ಎನ್ನುವುದಕ್ಕೆ ನಾವೂ ಕಾರಣೀಭೂತರು ಎಂದು ನಾವು ನಮ್ಮನ್ನು ಸಾಬೀತು ಪಡಿಸುವುದರಲ್ಲಿ ತಪ್ಪೇನಿಲ್ಲ. ಇದು ನಮ್ಮ ಹೆಮ್ಮೆ, ನಮ್ಮ ಗೌರವ. ಪ್ರತೀ ವರ್ಷವೂ, ಆನಂದ ಬಳಗ ಇನ್ನಷ್ಟು ಕಾರ್ಯಕ್ರಮ ನೀಡಲಿ, ನಮ್ಮ ಸದಸ್ಯರು ನಮ್ಮೊಳಗಿರುವ ಪ್ರತಿಭೆಯನ್ನು ವೇದಿಕೆಯಲ್ಲಿ ಪ್ರದರ್ಶಿಸಲು ಸದಸ್ಯರನ್ನು ತಮ್ಮ ಕಾರ್ಯಕ್ರಮಗಳಲ್ಲಿ ಇನ್ನಷ್ಟು ತೊಡಗಿಸಿ ಇನ್ನೂ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬರಲಿ ಎಂದು ಹಾರೈಸೋಣ.

## ಭಾರತದ ತೀರ್ಥಗಳಲ್ಲಿ ಅಂತರ್ಗತವಾದ ಭಗವದ್ರೂಪಗಳು

ವಿಶ್ವದ ಎಲ್ಲಾ ನದಿ–ತೊರೆ–ಕೆರೆ–ತೀರ್ಥಗಳಲ್ಲಿ ಭಗವಂತನ ಸನ್ನಿಧಾನ ಇರುವುದು ಅಸಂಶಿತ. ಜಗದೆಲ್ಲ ವಸ್ತುಗಳ, ಜೀವಗಳ ಅಂತರ್ಯಾಮಿ ಆ ಮಹಾವಿಷ್ಣು ಆಗಿರುತ್ತಾನೆ. ಒಂದೊಂದು ತೀರ್ಥದ ಭಾವದ್ರೂಪವಾಗಿ ಶ್ರೀಹರಿಯ ವಿವಿಧ ರೂಪಾವತಾರಗಳು ಅಂತರ್ಗತವಾಗಿರುತ್ತವೆ. ಹೀಗಾಗಿ, ನಾವು ಪುಣ್ಯಸ್ನಾನಗಳನ್ನು ಮಾಡುವಾಗ ಆಯಾ ತೀರ್ಥದ ಅಂತರ್ಯಾಮಿ ಭಗವದ್ರೂಪವನ್ನು ನೆನೆದು ತೀರ್ಥಸ್ನಾನದ ಸಂಪೂರ್ಣ ಫಲವನ್ನು ಪಡೆಯತಕ್ಕದ್ದು. ನನ್ನ ನಿಕಟ ಸಂಪರ್ಕದ ವಿದ್ವಾಂಸರ ಜ್ಞಾನಭಂಡಾರದ ನೆರವಿನಿಂದ ಇಂತಹ ಒಂದು ಸಂಕ್ಷಿಪ್ತ ಪಟ್ಟಿಯನ್ನು ತಯಾರಿಸಿ ನಿಮಗೆ ಪ್ರಸ್ತುತಪಡಿಸುವಲ್ಲಿ ಸಂತೋಷಪಡುತ್ತೇನೆ.

| ಸಂ. | ನದಿ / ತೀರ್ಥ | ಭಗವದ್ರೂಪ |
|---|---|---|
| 1 | ಗಂಗಾ | ಮಾಧವ |
| 2 | ಗೋದಾವರಿ | ವೀರನಾರಾಯಣ |
| 3 | ಕೃಷ್ಣವೇಣಿ (ಕೃಷ್ಣಾ) | ಕೃಷ್ಣ |
| 4 | ಕಾಳಿಂದಿ (ಪ. ಬಂಗಾಳ) | ಯಮಪುತ್ರ ಕೃಷ್ಣ |
| 5 | ಸರಸ್ವತಿ | ಪದ್ಮನಾಭ |
| 6 | ಕಾವೇರಿ | ರಂಗನಾಥ |
| 7 | ಸರಯೂ | ರಾಮ |
| 8 | ನರ್ಮದಾ | ಮಹಾವಿಷ್ಣು |
| 9 | ತುಂಗಭದ್ರಾ | ವರಾಹ |
| 10 | ಸಿಂಧು | ಕ್ಷೀರಾಬ್ಧಿಶಾಯೀ |
| 11 | ಭವನಾಶಿನಿ (ಅಹೋಬಿಲ) | ನರಸಿಂಹ |
| 12 | ಕುಮುದ್ವತಿ | ತ್ರಿವಿಕ್ರಮ |
| 13 | ವಂಜುಲಾ | ಹಯಗ್ರೀವ |
| 14 | ಭೀಮರತಿ (ಭೀಮಾ) | ಶ್ರೀಧರ |
| 15 | ತಾಮ್ರಪರಣೀ | ಅನಂತ |
| 16 | ಮಲಾಪಹಾರೀ | ಜನಾರ್ದನ |
| 17 | ಪಿನಾಕಿನೀ | ಕೇಶವ |
| 18 | ರಾಮೇಶ್ವರದ ತೀರ್ಥಗಳು | ರುದ್ರಾಂತರ್ಗತ ಲಕ್ಷ್ಮೀನರಸಿಂಹ |
| 19 | ಎಲ್ಲ ಸರೋವರಗಳು | ದತ್ತಾತ್ರೇಯ |
| 20 | ಸ್ವಯಂಪುಷ್ಕರಿಣೀ | ಅಧೋಕ್ಷಜ |
| 21 | ಚಂದ್ರಪುಷ್ಕರಿಣೀ | ವಾಮನ |
| 22 | ಮಾನಸಸರೋವರ | ಮಧುಸೂದನ |
| 23 | ದೇವಖಾತಗಳು | ಗದಾಧರ |
| 24 | ತಟಾಕಗಳು | ಶೇಷಶಾಯೀ ಅಚ್ಯುತ |
| 25 | ಬಾವಿಗಳು | ಚಕ್ರಪಾಣಿ |

– ಅಭಿಜಿತ್ ಆರ್. ಶಾಸ್ತ್ರೀ
ಬೆಂಗಳೂರು

## Sunandi
HOLISTIC ELDER CARE

### Integrated Elderly & Rehabilitation care, from illness to wellness, all under one roof.





- Assisted living
- Rejuvenation care
- Medical care

- Post-stroke rehab
- Parkinson's
- Dementia, Alzheimer

- Post-surgical care
- Critical care
- Palliative care

Long stay | Short stay | Day care

Sunandi Health & Wellness Pvt. Ltd.

080 23622220 / 9945212565 / 9845366324

www.sunandieldercare.com

277, NTI Layout, Phase 1, 3r Cross, Rajiv Gandhi Nagar, Sahakarnagar Post, Bengaluru-560092

## AURA Home Care

### Get medical care from the comfort of your own home. Our home care services are just a call away.


Caregiver service


Lab services


Physiotherapy


Doctor's consultation

Also available


Medical equipment | Nursing services | Preventive health | Ayurveda Therapy

Venture of AURAZIA Wellness Pvt. Ltd.

080 23622220 / 9945212565 / 8792227728

277, NTI Layout, Phase 1, 3r Cross, Rajiv Gandhi Nagar, Sahakarnagar Post, Bengaluru-560092

# ಕ್ರೀಡಾಮಿಲನ - 2025
# ಮಳೆಯನ್ನು ಲೆಕ್ಕಿಸದ ಕ್ರೀಡಾಸ್ಫೂರ್ತಿ!!



ಎಂ. ಸತ್ಯನಾರಾಯಣ ಭಟ್

ಅಂದು ಜನವರಿ 19, 2025 ಭಾನುವಾರ, ಸುಮಾರು ಹದಿನೈದು ದಿನಗಳಿಂದ ಕ್ರೀಡಾ ಮಿಲನಕ್ಕೆ ಸಿದ್ಧತೆ ನಡೆಯುತ್ತಾ ಇತ್ತು. ಭೃಗುವಾಣಿಯಲ್ಲಿ ಪ್ರಕಟಿಸಿರುವ ವಿವರಗಳಿಗೆ ಪೂರಕವಾಗಿ ಬಳಗದ 'ಎ' ಮತ್ತು 'ಬಿ' ವಾಟ್ಸಾಪ್ ಗ್ರೂಪ್‌ಗಳಲ್ಲಿ ವರ್ಣರಂಜಿತ ಅತ್ಯಾಕರ್ಷಕ ಫ್ಲೈಯರ್‌ಗಳು ಸರಾಗವಾಗಿ ಹರಿಯುತ್ತಾ ಇತ್ತು. ಸದಸ್ಯರೂ ಅಷ್ಟೇ ಫುಲ್ ಸ್ವಿಂಗ್‌ನಲ್ಲಿ ಭಾಗವಹಿಸಲು ತಯಾರಾಗಿದ್ದರು. ವರ್ಷಕ್ಕೊಮ್ಮೆ ಯುವ ವಿಭಾಗ ನಡೆಸುತ್ತಿರುವ ಕ್ರೀಡಾ ಮಿಲನ ಬಳಗದ ಸದಸ್ಯರಿಗೆ ಯಾವುದೇ ವಯಸ್ಸಿನ ಮಿತಿ ಇಲ್ಲದೆ, ತಮ್ಮ ಶಕ್ತಿ ಹಾಗೂ ತಾಕತ್ತಿಗೆ ಅನುಗುಣವಾಗಿ ವಿವಿಧ ಬಗೆಯ ಕ್ರೀಡೆಗಳಲ್ಲಿ ಭಾಗವಹಿಸಿ, ಬಹುಮಾನ ಗಿಟ್ಟಿಸುವ ಅಪರೂಪದ ಅವಕಾಶ. ಇದನ್ನು ನಮ್ಮ ಸದಸ್ಯರೂ ಬಿಡ್ತಾರಾ. ಯವರ್ ರೆಡಿ..

ಆದರೆ ಭಾನುವಾರ ಬೆಳಿಗ್ಗೆ ನೋಡಿದರೆ ಮಳೆಯ ಅಕಾಲಿಕ ಪ್ರತ್ಯಕ್ಷ ತುಂತುರು ಆಗಿ ಶುರು ಆಗಿ ಸ್ವಲ್ಪ ಜೋರಾಗಿಯೇ

**Ananda Balaga - Kreeda Milana - 2025**
**Winners Detail**

| CRICKET (Ladies and Gents) WINNERS | Group event RUNNERS UP |
|---|---|
| 01 Sudha S Rao ( Captain ) | Meghana Rao |
| 02 Devipriya | Atharva Deviprasad |
| 03 Ananthram Upadhya | Suchithra Deviprasad |
| 04 Siddhanth S Rao | Pallavi |
| 05 Vittaldas Tantry | M. Krishna Prasad |
| 06 Sheshanarayana Chadaga | Bharathi Ramesh |
| 07 Prarthana Karanth | Anitha. A. Bhat |
| 08 Vaishnavi Bhat | Agasthya P R |
| 09 Anvi Bhat | Ganesh Bhat |
| 10 Gopalakrishna Kunjathaya | Shubha Adiga |
| 11 Sudhanva | Dr Vijaya Kumar |
| **THROW BALL - Womens WINNERS** | **Group event RUNNERS UP** |
| 01 Pallavi ( Captain) | Prarthana Karanth (Captain) |
| 02 Sudha S Rao | Anitha. A. Bhat |
| 03 Alaka Arun. P | Bharathi. S |
| 04 Devipriya | Bharathi Ramesh |
| 05 Sowmya | Vaishnavi |
| 06 Srilekha Bhat | Priya |
| 07 Manjushree | Suhasini |
| 08 Ashwini | Shubha Adiga |

**Ananda Balaga - Kreeda Milana - 2025**
**Winners Detail**

| VOLLEY BALL - Mens WINNERS | Group event RUNNERS UP |
|---|---|
| 01 Dinesh Rao M (Captain) | Akash Vaidhya (Captain ) |
| 02 Subramanya | Sharath Adiga |
| 03 Chetan Rao M | Santhosh Bhat |
| 04 Bharath Upadhyaya | Atharva Deviprasad |
| 05 Pramodh Bhat | Sri Vishnu |
| 06 Anantha Krishna | Agasthya P R |
| 07 Guruprasad | Sachin R B |
| 08 Samarth Holla. P. R | |
| **CRICKET - Mens WINNERS** | **Group event RUNNERS UP** |
| 01 Madhukara Hebbar (Captain) | Dhanush Udupa (Captain ) |
| 02 Sharath Adiga | Srinidhi |
| 03 Chetan Rao M | Bharath Adiga |
| 04 Sughosh | Sughosh |
| 05 Manju Kishore | Karthik Kumar |
| 06 Muralidhara Rao | Udayashankar |
| 07 Bala Gopala Rao | Sandeep Rao |
| 08 Rajaneesh Tantry | Ganesh Bhat |
| 09 Nagaraj | Dhanush |
| 10 Raghavendra Holla | Pramodh Bhat |
| 11 Siddhanth S Rao | Anantharam Upadhya |
| 12 Atharva. P. R | Prashanth Kalluraya |
| 13 Supreeth Chadaga | Agasthya P R |
| 14 Anantha Krishna | |




ಸುರಿಯಲಾರಂಭಿಸಿತು. ಜಯನಗರದ ನ್ಯಾಷನಲ್ ಕಾಲೇಜಿನ ಕ್ರೀಡಾಂಗಣದಲ್ಲಿ ಮಳೆ ಬರದೇ ಇರಬಹುದು. ಬೆಂಗಳೂರು ಮಳೆ ಹಾಗೇ ಅಲ್ವಾ.. ಪಿನ್ ಕೋಡ್ ಪ್ರಕಾರ ಸುರಿಯುತ್ತದೆ. ಮೆಜೆಸ್ಟಿಕ್‌ನಲ್ಲಿ ಇದ್ದರೆ ಓಕಳಿಪುರಂನಲ್ಲಿ ಮಳೆಯ ಕುರುಹೇ ಇರುವುದಿಲ್ಲ. ಆ ಧೈರ್ಯದಲ್ಲಿ ಕ್ರೀಡಾ ಮಿಲನ ರೂವಾರಿ



ಎಂದೇ ಗುರುತಿಸಲ್ಪಟ್ಟ ಶ್ರೀ ಎಂ.ಕೆ. ಗುರುಮೂರ್ತಿಯವರು ಮತ್ತು ಅವರಿಗೆ ಹಲವಾರು ವರ್ಷಗಳಿಂದ ಸಮರ್ಥ ಸಾಥ್ ನೀಡುತ್ತಿರುವ ಯುವ ಐ.ಪಿ.ಎಸ್. (ಅಂದರೆ ಇಮೀಡಿಯಟ್ ಪಾಸ್ಟ್ ಸೆಕ್ರೆಟರಿ) ಶ್ರೀ ಸಂದೀಪ್ ರಾವ್ ಕ್ರೀಡಾಂಗಣದಲ್ಲಿ ಬೆಳಿಗ್ಗೆ 6.30ಕ್ಕೇ ಹಾಜರು. ಅಲ್ಲಿಂದ ಅಧ್ಯಕ್ಷರಿಗೆ, ಕಾರ್ಯದರ್ಶಿಗೆ ನಿಮಿಷ – ನಿಮಿಷದ ಅಪ್‌ಡೇಟ್ – ಮಳೆ ಬಗ್ಗೆ. ಕೊನೆಗೂ ಮಳೆ ನಿಂತಿದೆ ಅಂತ ಘೋಷಿಸಿಯೇ ಬಿಟ್ಟರು. (ಎಷ್ಟು ಸತ್ಯ ಸಂಗತಿ ಅಂತ ಇನ್ನೂ ತನಿಖೆ ನಡಿತಾ

**Ananda Balaga - Kreeda Milana - 2025 Sports Event Winners Detail**

| Sl No. | Details of Event | Age | First | Second | Third |
|---|---|---|---|---|---|
| 1 | 100 mts Running race - Girls and Boys | 10 to 16 yrs | Anirudh K R | Samarth Holla | Abhishek. V |
| 2 | 50 mts Running race -Boys & Girls | 5 to 10 yrs | Samarth Hebbar | Atharva P R | Mahathi B M |
| 3 | 100 mts Running race -Ladies | 16 to 35 yrs | Prarthana Karanth | Shubha Adiga | Srilekha Bhat |
| 4 | 100 mts Running race - Women | 35 yrs above | Anitha | Suhasini | Alaka Arun. P |
| 5 | 100mts Running race - Men | 16 to 35 yrs | Sachin. R.B | Raghavendra Bhat | Akash Vaidhya |
| 6 | 100 mts Running race - Men | 35yrs above | Veda Vyas | Srinidhi | Sharath Adiga |
| 7 | Ball aiming to the wicket (Boys &Girls) | 5 to 10 yrs | Atharva P R | Myra Rao | Ahalya Hebbar |
| 8 | Volley ball throw - Girls and Boys | 10 to 16 yrs | Siddhanth S Rao | Anirudh | Agasthya P R |
| 9 | Throwball throw - Ladies | 16 yrs above | Sudha S Rao | Shubha Adiga | Bhrathi. S |
| 10 | Lemon & Spoon - Girls and Boys | 10 to 16 yrs | Abhishek.V | Anirudh.K.R | Agasthy. P. R |
| 11 | Onti Kalina ota - Girls and Boys | 10 to 16 yrs | Anirudh.K.R | Aadhya Rao. K. R | Samarth Holla. P R |
| 12 | Lemon & Spoon ( Women ) | 35 yrs above | Devipriya | Bharathi Ramesh | Bharathi Nagaraj |
| 13 | Musical Chair Children | 5 to 10 yrs | Mahathi B M | Atharva P R | Aprameya |
| 14 | Musical Chair - Womens | 35 yrs above | Bharathi Ramesh | Bharathi Nagaraj | Sudha S Rao |
| 15 | Walking Race - Womens | 40 yrs above | Devipriya | Suhasini | Pallavi |
| 16 | Book Balancing - Girls and Boys | 10 to 16 yrs | Abhishek.V | Samarth Hebbar | Samarth Holla. P R |
| 17 | Book Balancing - Ladies | 16 yrs above | Shubha Adiga | Sudha S Rao | Prarthana Karanth |



ಇದೆ. ವರದಿ ಬರುವಾಗ ಐದಾರು ತಿಂಗಳು ಆಗಬಹುದು. (ಇದು ಸಾಮಾನ್ಯ ಅಲ್ವಾ.. ತನಿಖಾ ವರದಿಯ ಹಣೆ ಬರಹ) ಬಳಗದ ಗ್ರೂಪ್‌ಗಳಲ್ಲೂ ಹಾಕಿಯಾಯ್ತು. ಕ್ರೀಡಾಂಗಣದ ಫೋಟೋವನ್ನು ತೋರಿಸಿ, 'ಮಳೆ ಬರ್‍ತಾ ಇಲ್ಲ. ಕ್ರೀಡಾಮಿಲನ ಸಕಾಲಕ್ಕೆ ಆರಂಭ ಆಗ್ತಾ ಇದೆ. ಸದಸ್ಯರೆಲ್ಲಾ ಧಾವಿಸಿ ಬನ್ನಿ' ಅಂತ. ಆದರೆ ಸದಸ್ಯರಿಗೆ ಇನ್ನೂ ಯಾಕೋ ಸಂದೇಹ. ಅವರ ಮನೆಯ ಹತ್ತಿರ ಇನ್ನೂ ಮಳೆ ಸುರಿತಾ ಇರಬೇಕಾದರೆ ಈ ರೀತಿ ಸಂದೇಹ ಸಹಜ ತಾನೆ...?

ಅಷ್ಟೊತ್ತು ಆಗುವಾಗ ಬೆಳಿಗ್ಗೆ 9 ಗಂಟೆಯಾಯಿತು. ಹತ್ತು, ಇಪ್ಪತ್ತು, ಮೂವತ್ತು ಸದಸ್ಯರು ಬಂದಾಗಲೆಲ್ಲಾ ಯುವ ವಿಭಾಗದ ಸಂಚಾಲಕರಾದ ಶ್ರೀ ಗುರುರಾಜ ಪೇಜಾವರ್ ಮತ್ತು ಅವರ ಕಾರ್ಯತಂಡದ ಮುಖದಲ್ಲಿ ಏನೋ ಸಮಾಧಾನದ ಭಾವ. ಬೆಳಗ್ಗಿನ ಉಪಾಹಾರವನ್ನು 100 ಸದಸ್ಯರಿಗೆ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ಪ್ರಾಯೋಜಿಸಿದ್ದರು. ತಂದಿರುವ ತಿಂಡಿಯೆಲ್ಲಾ ಖರ್ಚಾಯಿತು. ಅಂದರೆ ಅಷ್ಟು ಸದಸ್ಯರು ಸೇರಿದ್ದರು. ಮಳೆ ಮಾತ್ರಾ ಲೈಟ್ ಆಗಿ ಬರ್ತಾ ಇತ್ತು.

ಕ್ರೀಡಾಮಿಲನದ ಔಪಚಾರಿಕ ಉದ್ಘಾಟನಾ ಸಮಾರಂಭದಲ್ಲಿ ಬಳಗದ ಅಧ್ಯಕ್ಷರು, ಮಾಜಿ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಉಪಾಧ್ಯಕ್ಷರಾದ ಶ್ರೀ ಪಿ.ಸಿ. ರಾವ್, ಶ್ರೀ ಕೆ.ಎನ್. ಅಡಿಗ, ಕಾರ್ಯದರ್ಶಿ, ಶ್ರೀ ಎಂ.ಎಸ್. ಭಟ್ ಉಪಸ್ಥಿತರಿದ್ದರು. ಕ್ರೀಡಾಮಿಲನದ ಉದ್ಘಾಟನೆಯನ್ನು ಹಂದೆ ಹಾಲ್‌ನ ಮಾಲಿಕರಾದ ಶ್ರೀ ಪ್ರಕಾಶ್ ಹಂದೆಯವರು ತ್ರಿವರ್ಣ ಧ್ವಜವನ್ನು ಕ್ರೀಡಾಳುಗಳಿಗೆ ಹಸ್ತಾಂತರಿಸುವ ಮೂಲಕ ನೆರವೇರಿಸಿದರು. ಶ್ರೀ ಗುರುರಾಜ ಪೇಜಾವರ್ ಸ್ವಾಗತಿಸಿದರೆ, ಶ್ರೀ ಬಿ.ಎಸ್. ಬಾಲಚಂದ್ರ ತೊಳ್ಪಾಡಿಯವರು ಕಾರ್ಯಕ್ರಮವನ್ನು ಸರಳ ರೀತಿಯಲ್ಲಿ ನಿರೂಪಿಸಿದರು. ಶ್ರೀ ಗುರುಮೂರ್ತಿಯವರು ಕ್ರೀಡಾಮಿಲನದ ನೀತಿ ನಿಯಮಗಳನ್ನು ವಿವರಿಸಿ, ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕ್ರೀಡಾಳುಗಳಿಂದ ಪಥ ಸಂಚಲನ, ಕ್ರೀಡಾ ಜ್ಯೋತಿಯ ಮೆರವಣಿಗೆ ಆಕರ್ಷಕವಾಗಿತ್ತು. ಅದರ ಜೊತೆ ಮಳೆಯೂ ತನ್ನ ಇರುವಿಕೆಯನ್ನು ತೋರ್ಪಡಿಸುತ್ತಿತ್ತು.

ಮಳೆಯ ಕಣ್ಣು – ಮುಚ್ಚಾಲೆಯ ನಡುವೆಯೇ ಆರು ತಂಡಗಳ ನಡುವೆ ಕ್ರಿಕೆಟ್ ಪಂದ್ಯಾವಳಿ, ಕಿಶೋರ ವಿಭಾಗದ ಕ್ರಿಕೆಟ್, ರನ್ನಿಂಗ್ ರೇಸ್, ನಡಿಗೆಯ ಓಟ, ತ್ರೋಬಾಲ್, ಹಗ್ಗ ಜಗ್ಗಾಟ, ವಾಲಿಬಾಲ್, ಪುಸ್ತಕದ ಓಟ... ಹೀಗೆ ವಿವಿಧ ವಯೋಮಾನದವರಿಗೆ ಒಪ್ಪುವ ಕ್ರೀಡಾ ಸ್ಪರ್ಧೆಗಳನ್ನು ಸಂಯೋಜಿಸಲಾಗಿತ್ತು. ತುಂತುರು ಮಳೆಯನ್ನು ಲೆಕ್ಕಿಸದೆ, ಎಲ್ಲಾ ಸ್ಪರ್ಧೆಗಳಲ್ಲಿ ಸಾಕಷ್ಟು ಸಂಖ್ಯೆಯ ಸದಸ್ಯರು ಪಾಲ್ಗೊಂಡಿರುವುದು ನಿಜವಾಗಿಯೂ ಆಶ್ಚರ್ಯದ ಆದರೆ ಅಷ್ಟೇ ಸತ್ಯವಾದ ವಿಚಾರ.



ಮಧ್ಯಾಹ್ನದ ಊಟದ ಹೊತ್ತಿಗೆ ತುಸು ಜೋರಾಗಿಯೇ ಬಂದ ಮಳೆಯ ಕಾರಣ ಕ್ರೀಡಾಮಿಲನವನ್ನು ಮೊಟಕುಗೊಳಿಸುವ ಪ್ರಸ್ತಾಪಗಳೂ ಅಲ್ಲಲ್ಲಿ ಬಂದರೂ, ಕಾರ್ಯಕರ್ತರ ಹಾಗೂ ಸ್ಪರ್ಧಾಳುಗಳ ಕ್ರೀಡಾ ಸ್ಫೂರ್ತಿಯ ಎದುರು ಈ ಯೋಚನೆಗಳೂ ಮಳೆ ನೀರಿನಲ್ಲಿ ಕರಗಿ ಹೋಯಿತು.

ಅಂತು ಮಳೆಯಲ್ಲೇ ನಡೆದ ಕ್ರೀಡಾ ಮಿಲನ, ಈ ವರ್ಷದ ವಿಶೇಷ ಆಕರ್ಷಣೆ ಎನ್ನಲೇ ಬೇಕು. ನಮ್ಮ ಸದಸ್ಯರು ಯಾವುದೇ ಅಡ್ಡಿ – ಆತಂಕ ಎದುರಾದರೂ ಅವುಗಳನ್ನು ಸಮರ್ಥವಾಗಿ ಎದುರಿಸುವ ಎದೆಗಾರಿಕೆಯನ್ನು ಹಾಗೂ ಮಾನಸಿಕ ದೃಢತೆಯನ್ನು ಮತ್ತೊಮ್ಮೆ ಸಾಬೀತು ಪಡಿಸಿರುವುದು ಶ್ಲಾಘನೀಯ.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿ, ಅಭಿನಂದಿಸಲಾಯಿತು. ಬಹುಮಾನ ವಿಜೇತರ ಜೊತೆಗೆ ಭಾಗವಹಿಸಿದ ಎಲ್ಲರಿಗೂ ಅಭಿನಂದನೇ ಸಲ್ಲಲೇಬೇಕು. ಎಲ್ಲದಕ್ಕಿಂತಲೂ ಹೆಚ್ಚಾಗಿ ಆಕಸ್ಮಿಕವಾಗಿ ಎದುರಾದ ಸವಾಲನ್ನು ಧೈರ್ಯದಿಂದ ನಿಭಾಯಿಸಿದ ಯುವ ವಿಭಾಗದ ಎಲ್ಲರಿಗೂ ಭೇಷ್ ಎನ್ನಲೇಬೇಕು.

*With Best Compliments from :*

## Hotel Sheetal


#32/12, Sheshadri Road
Ananda Rao Circle
Bangalore - 560 009
Ph : 41139560 - 64 | Mobile : 98457 77381




- Food and Drink : Restaurant, Room Service
- Services : Front Door 24x7, Baggage Storage, Lift Full-service laundry, House keeping
- Non AC Rooms, Private Bathroom

## Sheetal Residency

#3/1, Old Sawar Lane, Sheshadri Road
Near Sangolli Rayanna Circle
Bangalore - 560 009
Ph : 080 2234 3777 / 80 / 81

- Free Breakfast
- Near Public Transport
- Great Rooms (A/C)
- Great Service
- Free Wi-Fi
- Parking Area

info@sheetalresidency.com  www.sheetalresidency.com

ಎ. ಪ್ರಭಾಕರ ರಾವ್, ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು,

॥ ಹರಿಃ ಓಂ ॥

ayurveda

## ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು - 27, ದೂರವಾಣಿ : 22235533, 22241121

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.

ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ

(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು - 560 054
ದೂರವಾಣಿ : 23372422

ಶ್ರೀರಾಂಪುರ : 389, ಮಹಾಕವಿ ಕುವೆಂಪು ರಸ್ತೆ
ನಾಗಪ್ಪ ಬ್ಲಾಕ್, ಬೆಂಗಳೂರು - 21

## ಉಪಾಧ್ಯ ಆಯುರ್ವೇದ ಹೆಲ್ತ್‌ಕೇರ್

ಪೂರ್ಣಿಮ ರಿಜೆನ್ಸಿ ಹತ್ತಿರ, ಸಿದ್ಧಯ್ಯ ರಸ್ತೆ, ಬೆಂಗಳೂರು-27

# ಸಂಭ್ರಮದ ವಾರ್ಷಿಕೋತ್ಸವ

ಆನಂದ ಬಳಗದ 37ನೇ ವಾರ್ಷಿಕೋತ್ಸವವು ದಿ. 23.2.2025ರ ಭಾನುವಾರ ಉಡ್‌ಲ್ಯಾಂಡ್ಸ್ ಹೋಟೆಲ್‌ನ ಶ್ರೀ ಕೃಷ್ಣ ಸಭಾಂಗಣದಲ್ಲಿ ಸಂಭ್ರಮದಿಂದ ನೆರವೇರಿದೆ. ಅಂದು ಸಂಜೆ 4 ಗಂಟೆಗೆ ಪರಸ್ಪರ ವಸ್ತು ಮತ್ತು ಸೇವೆಗಳ ಪ್ರದರ್ಶನವನ್ನು ಬಳಗದ ಅಧ್ಯಕ್ಷರಾದ ಶ್ರೀ ಬಾ.ರಾಮಚಂದ್ರ ಉಪಾಧ್ಯರವರು ಔಪಚಾರಿಕವಾಗಿ ಉದ್ಘಾಟಿಸಿದರು. ಬಳಗದ 12 ಸದಸ್ಯರು ತಾವು ನೀಡುತ್ತಿರುವ ಸೇವೆ ಹಾಗೂ ಉತ್ಪಾದಿಸುತ್ತಿರುವ ಉತ್ಪನ್ನಗಳನ್ನು ಸದಸ್ಯರಿಗೆ ಪರಿಚಯಿಸುವತ್ತ ಈ 'ಪರಸ್ಪರದ' ಸದುಪಯೋಗವನ್ನು ಪಡೆದಿರುತ್ತಾರೆ. ಸಾಯಂಕಾಲ 4.15ಕ್ಕೆ ಲಘು ಉಪಾಹಾರದೊಂದಿಗೆ ಆರಂಭವಾದ ಲಘು ಸಂಗೀತ ಕಾರ್ಯಕ್ರಮದಲ್ಲಿ ಬಳಗದ ಕಲಾವಿದರಾದ ಶ್ರೀ ರಾಘವೇಂದ್ರ ಐತ್ತಾಳ, ಶ್ರೀ ಎಂ.ಕೆ. ಗುರು ಮೂರ್ತಿ, ಶ್ರೀ ಎಂ.ಕೆ. ಪ್ರಸಾದ್ ಮತ್ತು ಶ್ರೀ ರಾಜೇಶ್ ರಾವ್‌ರವರು ತಮ್ಮ ಗಾಯನ ಪ್ರತಿಭೆಯನ್ನು ಪ್ರದರ್ಶಿಸಿದರು. ಆನಂತರ ಝೀ ಕನ್ನಡ ವಾಹಿನಿಯ ಸರಿಗಮದ ಸೀಸನ್ 20 ಖ್ಯಾತಿಯ ಶ್ರೀ ಸಿ.ವಿ. ಅನ್ವಿತ್ ಕುಮಾರ್ ಸಾರಥ್ಯದಲ್ಲಿ ಗಾನ ಮಯೂರ ತಂಡವು ಪ್ರಸ್ತುತ ಪಡಿಸಿದ ಕುಂಚ, ನೃತ್ಯ, ಗಾಯನ ಸದಸ್ಯರ ಮನ ಸೂರೆಗೊಂಡಿತು. ಜನಪ್ರಿಯ ಗಾಯಕ ಶ್ರೀ ಅನ್ವಿತ್ ಕುಮಾರ್ ಜೊತೆಗೆ ಗಾಯಕಿ ಕುಮಾರಿ ತನುಶ್ರೀ, ನಾಟ್ಯ ಕಲಾವಿದೆ ಕುಮಾರಿ ಸುರಕ್ಷ ವೈಲಾಯ ಮತ್ತು ಕುಮಾರಿ ಸಿಂಚನ ಪಿ. ರಾವ್ ಮಾತ್ರವಲ್ಲದೆ ಚಿತ್ರಕಲಾವಿದ ಶ್ರೀ ಸದಾನಂದ ಪುರೋಹಿತರವರು ತಮ್ಮ ಅಮೋಘವಾದ ಕಲಾ ಕೌಶಲ್ಯವನ್ನು ಮೆರೆದ ಈ ಅಪರೂಪದ ಕಲಾ ಸಮ್ಮಿಲನ ಸಭಿಕರಿಗೆ ಖುಷಿ ನೀಡಿ ಅವರ ಮನರಂಜಿಸಿದೆ.




ಸುಮಾರು 6.15ಕ್ಕೆ ಪ್ರಾರಂಭವಾದ ಸಭಾ ಕಾರ್ಯಕ್ರಮ ಶ್ರೀಮತಿ ಶೈಲಜಾ ಶ್ರೀ ಹರಿ ಹಾಡಿದ ದೇವರ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಬಳಗದ ಉಪಾಧ್ಯಕ್ಷರಾದ ಶ್ರೀ ಕೆ.ಎನ್. ಅಡಿಗ ಅಡೂರುರವರು ಗಣ್ಯರನ್ನು ಮತ್ತು ಸಭಿಕರನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ಗೌರವಾನ್ವಿತ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ ಅವರು ವೇದಿಕೆಯಲ್ಲಿದ್ದ ಗಣ್ಯರ ಸಮ್ಮುಖದಲ್ಲಿ ಜ್ಯೋತಿಯನ್ನು ಬೆಳಗಿಸುವುದರ ಮೂಲಕ ಸಮಾರಂಭಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಬಳಗದ ಕಾರ್ಯದರ್ಶಿ ಶ್ರೀ ಎಂ. ಸತ್ಯನಾರಾಯಣ ಭಟ್‌ರವರು 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಮೂವರು ಗಣ್ಯರಿಗೆ 'ಆನಂದ ಸಮಾಜ ಭೂಷಣ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. **ಖ್ಯಾತ ವಿದ್ವಾಂಸರು, ಸಾಹಿತಿಗಳು ಮತ್ತು ಸಂಶೋಧಕರಾದ 'ಡಾ. ಕಬ್ಬಿನಾಲೆ ವಸಂತ ಭಾರದ್ವಾಜ', ಆನಂದ ಬಳಗದ ಪೋಷಕರು ಮತ್ತು ಸಮಾಜ ಮುಖೀ ಚಿಂತಕರಾದ 'ಶ್ರೀ ಕೆ. ಬಾಲಕೃಷ್ಣ ಉಪಾಧ್ಯಾಯ', ಜನಪ್ರಿಯ ಹೋಟೆಲ್ ಉದ್ಯಮಿ ಹಾಗೂ ಬಳಗದ ಮಾಜಿ ಅಧ್ಯಕ್ಷರಾದ ದಿ. 'ಯು. ಅನಂತ ಪದ್ಮನಾಭ ಬಲ್ಲಾಳ್'** ಇವರಿಗೆ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಡಾ. ಕಬ್ಬಿನಾಲೆಯವರ ಸನ್ಮಾನ ಪತ್ರವನ್ನು ಮಹಿಳಾ ವಿಭಾಗದ ಕಾರ್ಯದರ್ಶಿ ಶ್ರೀಮತಿ ಮೀನಾ ಮಹಾಬಲೇಶ್ವರ, ಶ್ರೀ ಉಪಾಧ್ಯಾಯರವರ ಸನ್ಮಾನ ಪತ್ರವನ್ನು ಶ್ರೀ ಸಂದೀಪ್ ರಾವ್





ಬಳಗ ಆರಂಭವಾದಾಗಿನಿಂದ ವಾರ್ಷಿಕೋತ್ಸವಕ್ಕೆ ಸಭಾಂಗಣ ಮತ್ತು ಇತರ ಸವಲತ್ತುಗಳನ್ನು ನೀಡುವುದಲ್ಲದೆ, ಸಂಜೆಯ ಉಪಾಹಾರ ಮತ್ತು ರಾತ್ರಿ ಭೋಜನದ ವ್ಯವಸ್ಥೆಯನ್ನು ಮಾಡುತ್ತಿರುವ ಉಡ್‌ಲ್ಯಾಂಡ್ಸ್ ಹೋಟೆಲ್‌ನವರ ಸೌಜನ್ಯವನ್ನು ಗುರುತಿಸಿ, ಅದರ ಮಾಲಿಕರಾದ ಶ್ರೀ ಕೆ. ವಾಸುದೇವರಾವ್ ಮತ್ತು ಶ್ರೀಮತಿ ಗೀತಾ ವಾಸುದೇವರಾವ್ ರವರನ್ನು ಅಭಿನಂದಿಸಲಾಯಿತು.

ಹಾಗೂ ಅನಂತ ಪದ್ಮನಾಭ ಬಲ್ಲಾಳ್‌ರವರ ಸನ್ಮಾನ ಪತ್ರವನ್ನು ಶ್ರೀ ಹರಿದಾಸ ಉಪಾಧ್ಯ ಅವರು ಓದುವುದರ ಮೂಲಕ ಸನ್ಮಾನಿತರ ಪರಿಚಯವನ್ನು ಮಾಡಿ ಕೊಟ್ಟರು. ಯು.ಎ.ವಿ. ಬಲ್ಲಾಳ್‌ರವರಿಗೆ ಸನ್ಮಾನ ಮಾಡುವ ಬಗ್ಗೆ ಸಮಿತಿಯಲ್ಲಿ ನಿರ್ಧಾರವಾದ ಮೇಲೆ ಅವರು ದೈವಾಧೀನರಾಗಿರುವ ಕಾರಣ, ಪ್ರಶಸ್ತಿಯನ್ನು ದಿ. ಬಲ್ಲಾಳ್‌ರವರ ಸಹಧರ್ಮಿಣಿ ಶ್ರೀಮತಿ ಪದ್ಮ ಮಣಿಯವರಿಗೆ ನೀಡಿ ಗೌರವಿಸಲಾಯಿತು.

ಸನ್ಮಾನಕ್ಕೆ ಪ್ರತಿಕ್ರಿಯೆ ರೂಪವಾಗಿ ಮಾತನಾಡಿದ ಡಾ. ಕಬ್ಬಿನಾಲೆಯವರು 'ಇಂದು ಸಮಾಜದಲ್ಲಿ ಜನರು ಸಂತೋಷದ ಹಿಂದೆ ಬಿದ್ದು ಹೋಗುತ್ತಿದ್ದಾರೆ. ಅದರ ಬದಲಿಗೆ ಅತೀಂದ್ರಿಯವಾದ ಸಂತೋಷ ನೀಡುವ ಆನಂದವನ್ನು ಸಂಪಾದಿಸುವತ್ತ ಎಲ್ಲರೂ ಶ್ರಮಿಸಬೇಕು. ಅದೇ ಶಾಶ್ವತವಾದ ನೆಮ್ಮದಿ ನೀಡಬಲ್ಲದು. ಆನಂದ ಬಳಗವು ಹೆಸರಿಗೆ ತಕ್ಕಂತೆ ಸದಸ್ಯರಿಗೆ ಆನಂದ ನೀಡುವ ಹಲವಾರು ಕಾರ್ಯಗಳನ್ನು ಮಾಡುತ್ತಿದ್ದು, ಇಂತಹ ಕಾರ್ಯಗಳು ಮತ್ತಷ್ಟು ಹೆಚ್ಚಾಗಲಿ ಎಂದು ಹಾರೈಸಿದರು. ಶ್ರೀ ಉಪಾಧ್ಯಾಯರವರು ಬಳಗಕ್ಕೆ ತಾನು ಸಲ್ಲಿಸಿದ ಕಿಂಚಿತ್ ಸೇವೆಯನ್ನು ಪರಿಗಣಿಸಿ ಸನ್ಮಾನ ಮಾಡಿರುವುದು ಬಳಗದ ಕಾರ್ಯಕಾರಿ ಸಮಿತಿಯ ಒಳ್ಳೆತನ. ಇದಕ್ಕಾಗಿ ಅವರು ಅಭಿನಂದನೀಯರು ಎಂದು ತಮ್ಮ ಹರ್ಷವನ್ನು ವ್ಯಕ್ತಿಪಡಿಸಿದರು.

ಮುಖ್ಯ ಅತಿಥಿಗಳ ಪರಿಚಯವನ್ನು ಶ್ರೀ ಎಂ. ಮೋಹನ್‌ರಾವ್ ಸಭೆಗೆ ಮಾಡಿಕೊಟ್ಟರು. ಅತಿಥಿಗಳಾದ ನ್ಯಾಯ ಮೂರ್ತಿ ಫಣೀಂದ್ರರವರು ತಮ್ಮ ಭಾಷಣದಲ್ಲಿ ಆನಂದ ಬಳಗವು ಮಾಡುತ್ತಿರುವ ಸಮಾಜ ಹಿತ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿ ಪ್ರಸಕ್ತ ವಿದ್ಯಾಮಾನದಲ್ಲಿ ಇಂತಹ ಸಂಘ ಸಂಸ್ಥೆಗಳು ಸಮಾಜದ ಹಿತದೃಷ್ಟಿ ಮತ್ತು ಸ್ವಾಸ್ಥ್ಯಕ್ಕಾಗಿ ಶ್ರಮಿಸುವುದು ಅತ್ಯಂತ ಅಗತ್ಯವೆಂದು ತಿಳಿಯ ಹೇಳಿದರು.

ಬಳಗದ ಅಧ್ಯಕ್ಷರಾದ ಡಾ. ರಾಮಚಂದ್ರ ಉಪಾಧ್ಯಾಯರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬಳಗದ ಮುನ್ನಡೆಗೆ ಸದಾ ಸಹಕಾರ ಮತ್ತು ಬೆಂಬಲ ನೀಡುತ್ತಿರುವ ಸರ್ವ ಸದಸ್ಯರನ್ನು ವಂದಿಸಿ, ಇನ್ನು ಮುಂದೆಯೂ ಇದೇ ರೀತಿಯ ಸಹಕಾರದಿಂದ ಬಳಗ ಇನ್ನಷ್ಟು ಸಾಧನೆ ಮಾಡಿ, ಪ್ರಗತಿ ಪಥದಲ್ಲಿ ಸಾಗುವಂತಾಗಲಿ ಎಂದು ಆಶಿಸಿದರು. ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಎಂ.ಕೆ. ಗುರುಮೂರ್ತಿಯವರು ಸೊಗಸಾಗಿ ಮಾಡಿದರೆ, ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಕಿಯಾಗಿ ಡಾ. ವೀಣಾ ಶರತ್ ಸಹಕರಿಸಿದರು. ಬಳಗದ ಕೋಶಾಧಿಕಾರಿ ಶ್ರೀ ಕೆ. ಗೋಪಾಲ ಕೃಷ್ಣ ಕುಂಜತ್ತಾಯರು ವಂದನಾರ್ಪಣೆ ಮಾಡಿದರು. ಮಹಿಳಾ ವಿಭಾಗ ಸಂಯೋಜಿಸಿದ್ದ 'ಲಕ್ಕಿ ಡಿಪ್'ನ ಅದೃಷ್ಟ ಶಾಲಿಗಳನ್ನು 'ಡ್ರಾ' ಮಾಡುವ ಪ್ರಕ್ರಿಯೆಯನ್ನು ಡಾ. ವೀಣಾ ಶರತ್ ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಮಾರಂಭದ ನಂತರ ಉಡ್ ಲ್ಯಾಂಡ್ಸ್ ಹೋಟೆಲ್‌ನ ಸೌಜನ್ಯದಲ್ಲಿ ಭರ್ಜರಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.

**– ಎಂ. ಸತ್ಯನಾರಾಯಣ ಭಟ್**

**ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ ವಿನಃ ಸಂಪಾದಕ ಮಂಡಳಿಯದ್ದಲ್ಲ.**

**ಸ್ಥಳಾಭಾವದ ಕಾರಣದಿಂದಾಗಿ ಕೆಲವು ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಅವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.**

**– ಸಂಪಾದಕರು**

ಕಿರುಕತೆ

# ಚುಂಚಮ್ಮನ ಗೂಡು



ಮಿತ್ರಾ ವೆಂಕಟ್ರಾಜ

ಬಳಗದ ಸದಸ್ಯೆ, ಮೂಲತಃ ಕುಂದಾಪುರದವರಾದ ಲೇಖಕಿ ಕನ್ನಡದ ಉತ್ತಮ ಸಣ್ಣ ಕಥಾ ಲೇಖಕರಲ್ಲಿ ಒಬ್ಬರು. 'ರುಕುಮಾಯಿ', 'ಹಕ್ಕಿ ಮತ್ತು ಅವಳು', ಮಾಯಕದ ಸತ್ಯ' ಮತ್ತು ನನ್ನಕ್ಕ ನಿಲೂಫರ್' ಎಂಬ ನಾಲ್ಕು ಕಥಾಸಂಕಲನಗಳನ್ನೂ, 'ಪಾಚಿ ಕಟ್ಟಿ ಪಾಗಾರ' ಎಂಬ ಕಾದಂಬರಿಯನ್ನೂ ಪ್ರಕಟಿಸಿದ್ದಾರೆ. ಹಕ್ಕಿ ಮತ್ತು ಅವಳು ಸಂಕಲನವು ಮಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯ ಪುಸ್ತಕವಾಗಿತ್ತು.

ನಳಿನಾ ತನ್ನ ಮನೆಯ ನೀರವ ವಾತಾವರಣದಲ್ಲಿ ಕೈಯ್ಯಲ್ಲಿ ಪುಸ್ತಕ ಹಿಡಿದು ಕುಳಿತಿದ್ದಳು. ಅಮೇರಿಕದ ಶಿಕಾಗೊದಲ್ಲಿರುವ ಅವಳ ಮನೆಯ ಕಿಟಕಿಯ ಗಾಜಿನ ಮೇಲೆ ಮಳೆಯ ನೀರಿನೊಂದಿಗೆ ಹಿಮದ ಹನಿಗಳು ಬಡಿಯುತ್ತಿದ್ದವು. ಅವಳು ತನ್ನ ಬಾಲ್ಯದ ಬೇಸಿಗೆಯನ್ನು ಕಳೆದ ವಿಶಾಲವಾದ, ದೊಡ್ಡಮನೆಯ ಬಗ್ಗೆ ವರ್ಷಗಳಿಂದ ಯೋಚಿಸಿರಲಿಲ್ಲ. ಆದರೆ ಅವಳ ಕೈಯಲ್ಲಿದ್ದ ಪುಸ್ತಕದ ಹಾಳೆಗಳಿಂದ ಬರುತ್ತಿದ್ದ ಹಳೆಯ ಕಾಗದದ ಪರಿಮಳವು ಅವಳನ್ನು ಹಿಂದಕ್ಕೆ ಎಳೆದುಕೊಂಡು ಹೋಯಿತು. ಅದೊಂದು ನಿಗೂಢ ಗುಪ್ತ ಸ್ಥಳ. ಮನೆಮಕ್ಕಳನ್ನು ಹೆದರಿಸಲು ದೊಡ್ಡವರು ಉಪಯೋಗಿಸುತ್ತಿದ್ದ ಅಸ್ತ್ರಗಳಲ್ಲಿ ಒಂದು. ಅದೇ ಚುಂಚಮ್ಮನ ಗೂಡು. ಅವಳು ಅದನ್ನು ಹೇಗೆ ಮರೆತಳು? ಅದೂ ಇಷ್ಟು ವರ್ಷ?

ನಳಿನಾ ಕಣ್ಣುಗಳನ್ನು ಮುಚ್ಚಿಕೊಂಡಳು, ನೆನಪು ಪ್ರವಾಹದಂತೆ ಹರಿಯಿತು. ಆಗ ಎಂಟು ವರ್ಷದವಳಿದ್ದಿರಬಹುದೇನೋ. ತೀರ ಸಪೂರ ಹಿಡಿಕಡ್ಡಿಯಂತಿದ್ದಳು. ಚಿಕ್ಕಮ್ಮನ ಮಗಳು ಕೀರ್ತಿಗಿಂತ ಎರಡು ತಿಂಗಳು ದೊಡ್ಡವಳೇ ಆದರೂ ತಂಗಿಯಂತೆ ಕಾಣುತ್ತಾಳೆಂದು ಎಲ್ಲರೂ ಹೇಳುತ್ತಿದ್ದರು. ಅಜ್ಜಿಯ ಮನೆಯ ನಡುಕೋಣೆಯಲ್ಲಿ ಕಡತಗಳನ್ನಿಟ್ಟ ಕೋಣೆಯ ಹಳೆಯ ಕಬ್ಬಿಣದ ಕಪಾಟಿನ ಹಿಂದಿನ ಕಿರಿದಾದ ಅಂತರದೊಳಗೆ ನುಸುಳುವಷ್ಟು ತೆಳ್ಳಗಿದ್ದಳು. ಕಪಾಟಿನ ಹಿಂದಿನ ಗೋಡೆಯೊಳಗೆ ಒಂದು ಗೂಡು. ಧೂಳು ಮತ್ತು ರಹಸ್ಯಗಳಿಂದ ಅಲ್ಲಿನ ಗಾಳಿಯು ದಪ್ಪವಾಗಿತ್ತೆಂದು ಅವಳಿಗೆ ಅನಿಸುತ್ತಿತ್ತು. ಕಳೆದುಹೋದ ಜೀವನದ ತುಣುಕುಗಳಿಂದ ತುಂಬಿದ ಆ ಹಳೆಯ ಗೂಡಿನಲ್ಲಿ ಮಾಸಿದ ಕಾಗದದ ಕಟ್ಟುಗಳು, ಒಡೆದ ಛಾಯಾಚಿತ್ರಗಳು, ಇನ್ನೂ ಏನೇನೋ ವಸ್ತುಗಳಿದ್ದವು. ನಳಿನಾ ಅಲ್ಲಿ ಗಂಟೆಗಟ್ಟಲೆ ಸಮಯ ಕಳೆದಿದ್ದಳು. ಅಲ್ಲಿದ್ದ ತುಣುಕುಗಳಿಂದ ಕತೆಗಳನ್ನು ಹೆಣೆಯುತ್ತ, ಕಲ್ಪನೆಯ ವ್ಯಕ್ತಿಗಳೊಡನೆ ಪಿಸುಗುಡುತ್ತಿದ್ದಳು.

ಈಗ ಯೋಚಿಸುತ್ತಿದ್ದಂತೆ, – ಜೀರ್ಣವಾದ ಕಾಗದಗಳ ವಾಸನೆಯೊಂದಿಗೆ ಲಾವಂಚದ ಪರಿಮಳದ ಘಮ ಅವಳ ಮೂಗಿಗೆ ಬಡಿದಂತಾಯಿತು. ಬರಿಗಾಲಿನ ಕೆಳಗಿನ ಮರದ ಹಲಗೆಗಳ ಕಿರುಗುಟ್ಟುವಿಕೆಯೊಂದಿಗೆ, ಬೆರಳುಗಳಲ್ಲಿ ಮಣ್ಣಿನ ಗೋಡೆಯ ತಂಪು ಸ್ಪರ್ಶದ ಅನುಭವ! ಬೇರೆ ಯಾರಾದರೂ ಆ ನಿಗೂಢ ಸ್ಥಳವನ್ನು ಕಂಡುಹಿಡಿದಿದ್ದಾರೆಯೇ? ಯಾರೊಬ್ಬರೂ ಪ್ರವೇಶಿಸದೆ, ತನಗಾಗಿ ಕಾಯುತ್ತಿದೆಯೇ? ಅಲ್ಲಿ ಅವಳು ಬೇರೆ ಏನನ್ನೋ ಬಚ್ಚಿಟ್ಟಿದ್ದಳು! ಅದೊಂದು ಬೆಳ್ಳಿಯ ನಾಣ್ಯ. ಅವರ ಅಜ್ಜಿ ನಳಿನಳ ಚಿಕ್ಕಮ್ಮನ ಮಗಳು ಕೀರ್ತಿಗೆ ಕೊಟ್ಟ ಆ ನಾಣ್ಯದಲ್ಲಿ ಇಂಗ್ಲೇಂಡಿನ ರಾಣಿಯ ಚಿತ್ರವಿತ್ತು. ಅಜ್ಜಿಗೆ ತನಗಿಂತಲೂ ಕೀರ್ತಿಯ ಮೇಲೆ ಕೊಂಡಾಟ ಜಾಸ್ತಿ ಎಂದು ನಳಿನಳಿಗೆ ಯಾವಾಗಲೂ ಅನಿಸುತ್ತಿತ್ತು. ತನ್ನ ಮಕ್ಕಳಲ್ಲೇ ಆಗಲಿ, ಮೊಮ್ಮಕ್ಕಳ ವಿಚಾರದಲ್ಲೇ ಆಗಲಿ, ಸ್ವಲ್ಪ ತಾರತಮ್ಯ ಮಾಡುವ ಅಭ್ಯಾಸವು ಅಜ್ಜಿಗೆ ಇತ್ತೆಂದು ದೊಡ್ಡವರು ಮಾತನಾಡಿಕೊಳ್ಳುವುದನ್ನೂ ಅವಳು ಕೇಳಿದ್ದಳು. ಯಾವುದೋ ಒಂದು ಕ್ಷಣದ ಈರ್ಷೆಯಲ್ಲಿ ಅವಳು ಆ ಪದಕವನ್ನು ತೆಗೆದಿಟ್ಟಿದ್ದಳು. ಹಾಗಂತ ಕೀರ್ತಿ ಮತ್ತು ನಳಿನರಲ್ಲಿ, ಚಿಕ್ಕಂದಿನಲ್ಲೆಂದೇನು ಇವತ್ತಿಗೂ ಆಪ್ತ ಒಡನಾಟವಿತ್ತು,

ಅಜ್ಜಯ್ಯನ ಶ್ರಾದ್ಧಕ್ಕೆಂದು ಪ್ರತಿವರ್ಷ ಬೇಸಗೆಯಲ್ಲಿ ಸೇರುತ್ತಿದ್ದ ಮಕ್ಕಳಲ್ಲಿ ಆಟ–ಒಡನಾಟಗಳಿದ್ದಷ್ಟೇ ಸಣ್ಣಪುಟ್ಟ ಜಗಳ–ಮನಸ್ತಾಪಗಳೂ ಇದ್ದದ್ದೇ. ಈಗ ಅದೇನೆಂಬುದೂ ನೆನಪಿಲ್ಲದ, ಯಾವುದೋ ಬಾಲಿಶ ಕಲಹದಿಂದ ನೊಂದ ಮನಸ್ಸು ನಾಣ್ಯವನ್ನು ತಾತ್ಕಾಲಿಕವಾಗಿಯಷ್ಟೇ ಅಡಗಿಸಿಡುವ ಕಾಯಕಕ್ಕೆ ಕೈ ಹಾಕಿತ್ತು. ಕೀರ್ತಿ ಅದನ್ನು ಹುಡುಕಾಡುವುದನ್ನು, ಹುಬ್ಬುಗಂಟಿಕ್ಕಿದ ಚಿಂತೆಯ ಮುಖ ಹೊತ್ತು ಓಡಾಡುವುದನ್ನು ನೋಡಬೇಕೆಂಬ ಹಂಬಲವಿತ್ತು ಅವಳಿಗೆ, ಅಷ್ಟೆ.

ಆದರೆ ಅಷ್ಟರಲ್ಲಿ ಬೇಸಿಗೆ ಮುಗಿದು, ಒಬ್ಬೊಬ್ಬರಾಗಿ ಮನೆಗೆ ಹೊರಟಿದ್ದರು. ಕೀರ್ತಿ ತನ್ನ ಬೆಳ್ಳಿ ನಾಣ್ಯವನ್ನು ಹುಡುಕಲು ಸುರುಮಾಡಿದ್ದಳಷ್ಟೇ. 'ಬೇಗ ಬೇಗ. ದೋಣಿ ಬಂದಾಯಿತ್. ಹೋಯಿ ಕೂಕೊ ಹೆಣ್ಣೆ. ತಡ ಆತ್ತು,' ಅವಳ ಮಾವ ನಳಿನಳನ್ನು ಮುಂದೆ ದೂಡಿ, ಎಂದಿನಂತೆ ಗಡಿಬಿಡಿ ಮಾಡುತ್ತ ಪೆಟ್ಟಿಗೆ–ಚೀಲಗಳನ್ನು ಸಾಗಿಸುತ್ತಿದ್ದ. ನಳಿನಳೂ ಎಲ್ಲರೊಡನೆ ಹೊರಡಬೇಕಾಯಿತು. ಬೆಳ್ಳಿಯ ನಾಣ್ಯವು ಚುಂಚಮ್ಮನ ಗೂಡಿನ ಧೂಳಿನಲ್ಲೇ ಹೂತುಹೋಯಿತು.

ಈಗ, ಸುಮಾರು ನಾಲ್ಕು ದಶಕಗಳ ನಂತರ, ಇದ್ದಕ್ಕಿದ್ದಂತೆ ಎಲ್ಲಿಲ್ಲದ ಕಾತರತೆಯು ಅವಳನ್ನು ಆವರಿಸಿತು. ಮನೆ

ಇನ್ನೂ ನಿಂತಿದೆಯೇ? ಚುಂಚಮ್ಮನ ಗೂಡು ಈಗಲೂ ಅಸ್ತಿತ್ವದಲ್ಲಿದೆಯೇ? ಮರೆತೇ ಹೋಗಿದ್ದ, ಬಾಲ್ಯದ ಕಿಡಿಗೇಡಿತನದ ತುಣುಕಾದ ಆ ಪದಕವು ಧೂಳಿನಲ್ಲಿ ಕಾಯುತ್ತಾ ಇನ್ನೂ ಅಲ್ಲಿಯೇ ಇರಬಹುದೇ?

ಫೋನಿನ ಕಿಣಿಕಿಣಿಯು, 'ಕೀರ್ತಿ ಆಚಾರ್ ಆನ್ ದ ಲೈನ್,' ಎಂದು ಘೋಷಿಸಿತು. ಅಮೇರಿಕದಲ್ಲೇ ಇರುವ ಕೀರ್ತಿಯೊಡನೆ ಆಗೊಮ್ಮೆ ಈಗೊಮ್ಮೆ ಮಾತುಕತೆ ಆಗುತ್ತಿರುತ್ತಿತ್ತಾದರೂ, ಆ ಗಳಿಗೆಯಲ್ಲಿ ನಳಿನಳಿಗೆ ಯಾಕೋ ಮುಜುಗರವೆನಿಸಿತು.

'ಏ, ನನ್ನೀ, ನಿಂಗ್ ಗೊತ್ತಾಯ್ತನ? ಹಾಲಳ್ಳಿ ಅಜ್ಜಿ ಮನೆ ಬೀಳ್ಸಿ ಹೊಸ ಮನೆ ಕಟ್ತಾರಂತಲ್ಲ, ನಂಗ್ ಹೋಗ್ಬೇಕಂತ ಉಂಟು. ನೀ ಬರ್ತಿಯಾ? ನಂಗ್ ಚುಂಚಮ್ಮನ್ ಗೂಡ್ ಕಾಣ್ಬೇಕಂತ ಮನಸ್ಸು....' ಮಾತಿನ ಕೊನೆಯಲ್ಲಿ ಅಹ್ ಅಹಹಹಾ.. ಎಂದು ನಕ್ಕಳು. ಅದು ಕೀರ್ತಿಯ ಸ್ವಂತ ಶೈಲಿಯ ನಗೆ, ಮಾತಿನ ಕೊನೆಯ ಉದ್ದದ ಪೂರ್ಣವಿರಾಮ. ನಳಿನಾ ಮಾತ್ರ ಕ್ಷಣಕಾಲ ಬಾಯಿಂದ ಮಾತು ಹೊರಡದಷ್ಟು ಮರಗಟ್ಟಿದ್ದಳು. ಏಕಕಾಲದಲ್ಲಿ ಇಬ್ಬರಲ್ಲೂ ಅದೆಂತಹ ಬಯಕೆ! ಹೊರಗೆ ಹಿಮದ ಭರಾಟೆ ಜೋರಾಗಿತ್ತು. ಇದು ಚುಂಚಮ್ಮಂದೇ ಕಾರುಭಾರು ಇದ್ದಿರಬಹುದೇ ಎಂದು ಕೊಳ್ಳುವಾಗ ಅವಳ ಗಂಟಲಿಂದಲೂ ಕೀರ್ತಿಯಂತಹದ್ದೇ ನಗು ಪ್ರತಿಧ್ವನಿಸಿತು.

ಯಾವಾಗ ಹೊರಡುವುದು, ಹೇಗೆ, ಎಲ್ಲಿ ಎಂದು ನಳಿನ–ಕೀರ್ತಿಯರ ಮಾತುಕತೆ ಮುಂದುವರಿಯಿತು.

## ಸದಸ್ಯತ್ವ ವಿಭಾಗ – ಮನವಿ

ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ. ಸದಸ್ಯತ್ವದ ಫಾರಂಗಳು www.anandabalaga.orgಯಲ್ಲಿ ಲಭ್ಯವಿದ್ದು, ಫಾರಂ ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕದೊಂದಿಗೆ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

❖ ❖ ❖

ಬಳಗದ ಆಜೀವ ಸದಸ್ಯತ್ವ ಹೊಂದಿದ್ದ ದಿವಂಗತರಾದ ಸದಸ್ಯರ ಪತ್ನಿ/ಪತಿ ಹಾಗೂ ಮಕ್ಕಳು ಬಳಗದ ಹೊಸ ಸದಸ್ಯತ್ವವನ್ನು ಪಡೆಯಲು ವಿನಂತಿ. (ಆನಂದ ಬಳಗದ Bye-lawದಲ್ಲಿ ದಿವಂಗತರಾದವರ ಸದಸ್ಯತ್ವವನ್ನು ಅವರ ಹೆಂಡತಿ ಅಥವಾ ಮಕ್ಕಳಿಗೆ ಮುಂದುವರೆಸಲು ಅವಕಾಶವಿರುವುದಿಲ್ಲ)

**ದಿನೇಶ್ ರಾವ್ ಎಂ.,**
ಸಂಚಾಲಕರು ಸದಸ್ಯತ್ವ ಅಭಿವೃದ್ಧಿ ವಿಭಾಗ,
ಮೊಬೈಲ್: 99456 88955

## ಗಾಯತ್ರಿ ಟೂರ್ಸ್ ಎಂಡ್ ಟ್ರಾವೆಲ್ಸ್

**ಆನಂದ ಬಳಗದ ಸದಸ್ಯರಿಗೆ ವಿಶೇಷ ರಿಯಾಯಿತಿ ನೀಡಲಾಗುವುದು.**



* ವಾರಣಾಸಿ, ಪ್ರಯಾಗ್‌ರಾಜ್, ಅಯೋಧ್ಯಾ, ಕಾಶಿ, ಗಯಾ, ಬುದ್ಧ ಗಯಾ, ಭುವನೇಶ್ವರ, ಕೋನಾರ್ಕ್, ಪುರಿ ಜಗನ್ನಾಥ – ಬೆಂಗಳೂರು – 12 ದಿನಗಳ ಪ್ರವಾಸ ಒಬ್ಬರಿಗೆ ರೂ. 35,000/–
* ವಾರಣಾಸಿ, ಪ್ರಯಾಗ, ಅಯೋಧ್ಯ, ಗಯಾ, ಬುದ್ಧ ಗಯಾ, ವಾರಣಾಸಿ – ಬೆಂಗಳೂರು 8 ದಿನಗಳ ಪ್ರವಾಸ ಒಬ್ಬರಿಗೆ ರೂ.22,000/–
* ದೆಹಲಿ, ಆಗ್ರಾ, ಮಥುರಾ, ವೃಂದಾವನ, ಗೋಕುಲ, ಹರಿದ್ವಾರ, ಬದರೀನಾಥ, ಹೃಷೀಕೇಶ, ಹರಿದ್ವಾರ, – ಬೆಂಗಳೂರು – 13 ದಿನಗಳ ಪ್ರವಾಸ ಒಬ್ಬರಿಗೆ ರೂ.35,000/–

*** ದರದಲ್ಲಿ 3 ಎ.ಸಿ.ಸ್ಲೀಪರ್ ಕ್ಲಾಸ್ ರೈಲು ಪ್ರಯಾಣ, ಎ.ಸಿ.ಟಿ.ಟಿ., ತಂಗಲು ಸೂಪರ್ ಡಿಲಕ್ಸ್ ಎ.ಸಿ.ರೂಮ್, ಊಟ, ತಿಂಡಿ ಎಲ್ಲ ಸೇರುತ್ತದೆ.**

*** Flight Charges Extra.**

**ಹೆಚ್ಚಿನ ವಿವರಗಳಿಗಳಿಗಾಗಿ ಸಂಪರ್ಕಿಸಿ : ಎಂ. ನರಸಿಂಹ ಆಚಾರ್ಯ**
**ಮೊಬೈಲ್ : 7411867696 / 7975879148**

# Ananda Balaga's Enduring Bond with Hotel Ajantha (2004–2024)



Sharath Chandra

Ananda Balaga established a unique and enduring relationship with Hotel Ajantha beginning in 2004, under the leadership of the late Sri Palimaru Jayarama Bagilthaya, who assumed the Presidentship of Ananda Balaga that year. From that point onward, almost all Executive Committee meetings and Annual General Body meetings were held at Hotel Ajantha. This tradition persisted even after Sri P.J. Bagilthaya stepped down as President in March 2008.

For over two decades, every second Saturday of the month became a dedicated journey to Hotel Ajantha for EC members, where they deliberated and organized an impressive average of twelve programs annually. In many ways, Hotel Ajantha became a second home for Ananda Balaga's activities, serving not just as a venue but as a vital operational hub.

Membership applications and correspondences were routinely directed to the hotel, and for a significant period, Ananda Balaga's quarterly magazine, Brughuvani, was sorted, stamped, and posted from there. The hotel staff even contributed their time and effort to support Balaga's activities. Additionally, many programs were regularly hosted in the banquet halls at Hotel Ajantha, making the venue an integral part of Balaga's identity.

Following Sri P.J. Bagilthaya's passing, the tradition and relationship with Hotel Ajantha continued, with the Bagilthaya family extending unwavering logistical and financial support to Ananda Balaga. This partnership thrived until the end of 2024, when the iconic Hotel Ajantha, a landmark in Bangalore, ceased its operations on December 31.










# One Stop Solution For Your Investment Needs

## Who we are:

- Over **15 years'** market presence
- Trusted by more than **3000 customers**
- Over ₹**650 crores** of Mutual Fund Assets Under Management
- Servicing clients across India **since 2009**

## The ARA Advantage

- Portfolio Building
- Weekly Updates
- Annual Transaction Reports
- Periodic Portfolio Review
- Online Access

**CONTACT US TODAY FOR:**

Personalised Expert Guidance for your Investments

Financial Awareness Session for employees of your organisation or a small group

ARA
Invest... Aram Se!

**ARA FINANCIAL SERVICES PVT. LTD.**
**AMFI - Registered Mutual Fund Distributor**
Ph: 080 4098 1827 | 95388 84307 | ara@arafinserv.com
**Visit: www.arafinserv.com to know more**

Investing made easy watch our videos

Subscribe to YouTube channel

# ಸಂಗೀತದ ಮೇಲ್ನೋಟ



ಡಾ. ವಿಶ್ವೇಶ್ ಭಟ್

ಡಾ. ವಿಶ್ವೇಶ್ ಭಟ್ ರವರು ಕರ್ನಾಟಕ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸೇರಿದಂತೆ ಹಲವು ವಿಶ್ವ ಸಂಗೀತ ಪ್ರಕಾರಗಳಲ್ಲಿ ಪರಿಣಿತಿ ಹೊಂದಿರುತ್ತಾರೆ. ಇವರು ಗಾಯಕರು, ಸಂಗೀತ ನಿರ್ದೇಶಕರು, ವ್ಯಂಗ್ಯಚಿತ್ರಗಾರರು, ಹಾಗೂ ವೃತ್ತಿಯಲ್ಲಿ ಕಳೆದ 28 ವರ್ಷಗಳಿಂದ IT ತಂತ್ರಜ್ಞಾನ ಕ್ಷೇತ್ರದಲ್ಲಿದ್ದು, ಪ್ರಸ್ತುತ NTTDATA ಸಂಸ್ಥೆಯಲ್ಲಿ IT Director ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಹಲವು ಭಾಷೆ, ಹಲವು ಸಂಗೀತ ಪ್ರಕಾರಗಳನ್ನುರಾಗಗಳ ಮೂಲಕ ವಿಭಿನ್ನ ಶೈಲಿಯಲ್ಲಿಪ್ರಸ್ತುತ ಪಡಿಸುವ ಭಾರತದ ಹೆಮ್ಮೆಯ ಕನ್ನಡಿಗರು.

ನನ್ನ ಹಿಂದಿನ ಸಂಚಿಕೆಯಲ್ಲಿ ಮಕ್ಕಳಿಗೆ ಯಾವ ಸಂಗೀತದ ಅವಶ್ಯಕತೆ ಇದೆ ಎಂಬುದರ ಬಗ್ಗೆ ಬರೆದಿದ್ದೆ. ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಮುಖ್ಯವಾಗಿ 2 ಪ್ರಕಾರಗಳು –ಕರ್ನಾಟಕ ಶಾಸ್ತ್ರೀಯ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯಸಂಗೀತ. ಇಂದಿನ ಸಂಚಿಕೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಾಕಾರದ ಬಗ್ಗೆ ತಕ್ಕ ಮಟ್ಟಿಗೆ ಬರೆಯುವ ಪ್ರಯತ್ನ ಮಾಡುತ್ತೇನೆ. ಹೆಚ್ಚಿನ ವಿಷಯಗಳು ಸಾಮಾಜಿಕ ಜಾಲತಾಣದಲ್ಲಿ ಇರುವುದರಿಂದ ಕೆಲವು ವಿಶೇಷವಾದ ಅಂಶಗಳಿಗೆ ಮಾತ್ರ ಇಲ್ಲಿ ಒತ್ತು ಕೊಡುವೆ.

ಇತಿಹಾಸ– 12,13ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಬಹುಷಃ ಇಸ್ಲಾಂನ ಆಡಳಿತ ಹೆಚ್ಚಾಗಿದ್ದಾಗ ದಕ್ಷಿಣದ ಕರ್ನಾಟಕದಲ್ಲಿ ಈ ಸಂಗೀತ ಪ್ರಾಕಾರ ಹುಟ್ಟಿರಬಹುದು ಎಂದು ಹೇಳಬಹುದು. ಶ್ರೀ ಪುರಂದರದಾಸರು 'ಕರ್ನಾಟಕ ಸಂಗೀತ ಪಿತಾಮಹ'ರೆಂದೇ ಹೆಸರಾದವರು. 'ಮಾಯ ಮಾಳವ ಗೌಳ' ರಾಗದಿಂದ ಆರಂಭಿಸಿ, ಸ್ವರದ ಅಲಂಕಾರದ ಮೂಲಕ ಹೊಸ ಪದ್ಧತಿಯನ್ನೇ ಹೊರ ತಂದರು. ಪುರಂದರದಾಸರು ಭಕ್ತಿಯನ್ನು ಸಂಗೀತದ ಮೂಲಕ ಬೋಧಿಸಿದವರು. 'ಮಲಹರಿ' ರಾಗದ ಮೂಲಕ ಲಂಬೋದರ ಲಕುಮಿಕರ, ಕುಂದ ಗೌರ, ಕೆರೆಯ ನೀರನು ಕೆರೆಗೆ ಚಲ್ಲಿ, ಪದುಮನಾಭ ಇತ್ಯಾದಿ ಗೀತೆಗಳ ಮೂಲಕ ಆರಂಭಿಸಿದವರು.

'ರಾಗ' ಎಂಬುದು ಶ್ರುತಿಬದ್ಧವಾದ ರಚನೆಯನ್ನು ಸೃಷ್ಟಿಸಲು ಇರುವ ನಿಯಮಗಳ ವ್ಯವಸ್ಥೆ. ಪ್ರತಿ ರಾಗವೂ ಆರೋಹಣ, ಅವರೋಹಣಗಳ ಮೂಲಕ ನಿರ್ದಿಷ್ಟವಾಗಿದ್ದು ಪ್ರತೀ ರಾಗಕ್ಕೂ ವಿಶೇಷವಾದ ಸ್ಥಾನವಿದೆ. ಕರ್ನಾಟಕ ಸಂಗೀತದ ರಾಗಗಳನ್ನು72 ಮೇಳಕರ್ತಗಳರೂಪದಲ್ಲಿ ಅತ್ಯಂತ ರಚನಾತ್ಮಕವಾಗಿ ವರ್ಗೀಕರಿಸಿದ್ದಾರೆ. ಇದೇ ರೀತಿಯ ರಾಗಗಳು ಹಿಂದೂಸ್ತಾನಿ ಶೈಲಿಯಲ್ಲಿದ್ದರೂ ಪ್ರಸ್ತುತಿ ಯಲ್ಲಿ ವ್ಯತ್ಯಾಸವಿರುತ್ತದೆ. ವಿಂಗಡಣೆಯೂ ವಿಭಿನ್ನವಾಗಿರುತ್ತದೆ. ಇದಲ್ಲದೆ ಹಿಂದೂಸ್ತಾನಿ ಸಂಗೀತದಲ್ಲಿ ಇಲ್ಲದಿರುವ 'ಗಮಕಕ್ಕೆ' ಇಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ.

"ತಾಳ"ಎಂಬುದು ಲಯ–ವಿನ್ಯಾಸವನ್ನು (Rythm pattern) ನಿರ್ದೇಶಿಸುತ್ತದೆ. ಸಂಗೀತದಲ್ಲಿ ಸಮಯದ ಮೂಲಮಾನಕ್ಕೆ ಮಾತ್ರೆ ಎಂದು ಹೆಸರು. ಸಂಗೀತಗಾರರು ತಮ್ಮ ಕೈಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ತಟ್ಟುವುದರ ಮೂಲಕ ಈ ಲಯದ ಲೆಕ್ಕವಿಟ್ಟು ಕೊಳ್ಳುತ್ತಾರೆ. ತಾಳ ಸಮಯದ ಲೆಕ್ಕವನ್ನೂ ಇಟ್ಟುಕೊಳ್ಳಲು ಉಪಯೋಗವಾಗುತ್ತದೆ. ತಾಳವನ್ನು ತೋರಿಸಲು ಉಪಯೋಗಿಸುವ ವಾದ್ಯ ಮೃದಂಗ.

ಕೀರ್ತನೆಗಳು ಸಾಮಾನ್ಯವಾಗಿ ಮೂರು ಭಾಗಗಳನ್ನು ಹೊಂದಿರುತ್ತವೆ: ಪಲ್ಲವಿ, ಅನುಪಲ್ಲವಿ ಹಾಗು ಚರಣ. ಸಂಗೀತ ಕಛೇರಿಗಳಲ್ಲಿ ಹೆಚ್ಚಾಗಿ ಪೂರ್ವ ತಯಾರಿಯಿಲ್ಲದೆ ಸಂಗೀತಗಾರರ ಮನೋಧರ್ಮಕ್ಕನುಗುಣವಾಗಿ ಪರಿಚಯಿಸಲ್ಪಡುವ ಅಂಶಗಳಿರುತ್ತವೆ. ರಾಗ ಆಲಾಪನೆ

ಕೇಳುಗರಲ್ಲಿ ಆ ಕೃತಿಯನ್ನು ಹಾಡಲ್ಪಡುವ ರಾಗದ ಭಾವವನ್ನು ಮೂಡಿಸುವ ಉದ್ದೇಶವನ್ನು ಹೊಂದಿರುತ್ತದೆ. ನೆರವಲ್ ಮತ್ತು ಕಲ್ಪನಾ ಸ್ವರಗಳನ್ನು ಹೆಚ್ಚು ಅನುಭವವುಳ್ಳ ಸಂಗೀತಗಾರರು ಮಾತ್ರ ಉಪಯೋಗಿಸುತ್ತಾರೆ.



ಕರ್ನಾಟಕ ಸಂಗೀತದ ಹೆಚ್ಚಿನ ಕೃತಿಗಳು ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಯಲ್ಲಿವೆ. ಇಲ್ಲಿ ಹೆಚ್ಚಾಗಿ ದೇವರನ್ನು ಆರಾಧಿಸುವಂತಹ, ಭಕ್ತಿ ಪ್ರಾಧಾನ್ಯತೆ ಇರುವ ಕೃತಿಗಳು. ಕರ್ನಾಟಕ ಸಂಗೀತದ ತ್ರಿಮೂರ್ತಿ (Trinity of Carnatic music) ಎಂದೇ ಪ್ರಸಿದ್ಧಿಗೊಂಡಿರುವ ಶ್ರೀ ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು, ಶ್ಯಾಮ

ಶಾಸ್ತ್ರಿಗಳೆಲ್ಲರೂ ಸಂಸ್ಕೃತ ಪಾಂಡಿತ್ಯ ಹೊಂದಿದ್ದವರು. ದೀಕ್ಷಿತರ ಹೆಚ್ಚಿನ ಕೃತಿಗಳು ಸಂಸ್ಕೃತ ಭಾಷೆಯದ್ದೇ. ಅವರ ವಾತಾಪಿ ಗಣಪತಿಮ್ ಭಜೇ, ಮಹಾ ಗಣಪತಿಮ್, ಶಕ್ತಿ ಸಹಿತ ಗಣಪತಿಮ್ ಇತ್ಯಾದಿ ಜನಪ್ರಿಯವಾದದ್ದು. ಮಕ್ಕಳಗಾಗಿ ರಚಿಸಿದ ನೋಟು ಸ್ವರಗಳು ಸಹ ಜನಪ್ರಿಯ ವಾದದ್ದು. ದೇವಿ, ಮೀನಾಕ್ಷಿಯ ಬಗ್ಗೆಯೂ ಹಲವು ಕೃತಿಗಳನ್ನು ರಚಿಸಿದ್ದಾರೆ.

ತ್ಯಾಗರಾಜರುಶ್ರೀರಾಮನ ಆರಾಧಕರಾಗಿದ್ದು ಅವರ ಕೀರ್ತನೆಗಳೆಲ್ಲವೂ ಹೆಚ್ಚಾಗಿ ರಾಮನ ಬಗ್ಗೆ ಇರುತ್ತದೆ. ಅವರ ಪಂಚರತ್ನ 5 ಕೃತಿಗಳು ಅತ್ಯಂತ ಜನಪ್ರಿಯವಾದದ್ದು. ಪ್ರತೀ ಕೃತಿಯನ್ನು ತ್ಯಾಗರಾಜರು ಸ್ವರ ಮತ್ತು ಸಾಹಿತ್ಯವನ್ನು ವಿಭಿನ್ನವಾಗಿ ಸೇರಿಸಿ ಸಂಯೋಜನೆ ಮಾಡಿದ್ದು ನಿಜಕ್ಕೂ ಇವು ಸಂಗೀತ ಪ್ರಪಂಚದಲ್ಲಿ "ಪಂಚರತ್ನ" ಕೃತಿಗಳೇ.

ಇಷ್ಟೊಂದು ಕ್ಲಿಷ್ಟವಾಗಿ ಶಾಸ್ತ್ರೀಯ ಸಂಗೀತವು ನಿರ್ದೇಶಿಸಲ್ಪಟ್ಟಿರುವುದರಿಂದ short cut ಮೂಲಕ ಒಂದೆರಡು ಹಾಡುಗಳನ್ನು ಕಲಿತರೆ ಸರಿಯಾಗದು. ವರ್ಷಾನುಗಟ್ಟಲೆ ಅಭ್ಯಾಸ ನಡೆಸಿ ಮುಂದೆ ಬರಬೇಕು. ಯಾವುದೇ ಶಾಸ್ತ್ರೀಯ ಸಂಗೀತವು ಕೇವಲ ಮನೋರಂಜನೆಗಾಗಿ ಆಗದಿರುವುದರಿಂದ ಯುವ ಪೀಳಿಗೆಯನ್ನು ಆಕರ್ಷಿಸಲು ಹೆಚ್ಚಿನ ಪ್ರಯತ್ನ ಮಾಡಬೇಕಾಗುತ್ತದೆ. ಅದರ ಬಗೆಗಿನ ಜಥಿಠಿಣಡಿಜ ಆರಂಭದಿಂದಲೇ ಮಕ್ಕಳಿಗೆ ನೀಡಿದ್ದಲ್ಲಿ ಸುಲಭವಾಗುತ್ತದೆ.

## ಬದುಕು ಜಟಕಾ ಬಂಡಿ



ಒಬ್ಬ 30 ವರ್ಷದ ಹುಡುಗ ತನ್ನ ತಂದೆಯನ್ನು ಅನಾಥಾಶ್ರಮಕ್ಕೆ ಸೇರಿಸಲು ಬರುತ್ತಾನೆ.

ಅಲ್ಲಿ ಇದ್ದ ವಾಚ್ ಮೇನ್ ಆ ಹುಡುಗನ ತಂದೆಯವರಿಗೆ ನಮಸ್ಕರಿಸಿ ಯೋಗಕ್ಷೇಮ ವಿಚಾರಿಸುತ್ತಾನೆ.

ಆಗ ಆ ಹುಡುಗ ಆ ವಾಚ್ ಮ್ಯಾನ್‌ಗೆ ಕೇಳುತ್ತಾನೆ.

ನಿಮಗೆ ಇವರ ಪರಿಚಯವಿದೆಯೇ.

ಹೌದು, ಈ ಪುಣ್ಯಾತ್ಮ ಈ ಅನಾಥಾಶ್ರಮದಿಂದ ಒಂದು ಪುಟ್ಟ ಮಗುವನ್ನು ದತ್ತು ತೆಗೆದುಕೊಂಡು ಹೋಗಿದ್ದರು.

30 ವರ್ಷದ ಹಿಂದಿನ ನೆನಪು ಅಂದ.

ಬಾಲಣ್ಣ

## ನಮ್ಮನ್ನಗಲಿದ ಯು.ಎ.ಪಿ. ಬಲ್ಲಾಳ್‌ರವರಿಗೆಗೌರವದ ಶ್ರದ್ಧಾಂಜಲಿ



ಆನಂದ ಬಳಗದಲ್ಲಿ 2000 – 02ನೇ ಅವಧಿಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ತಮ್ಮ ದಕ್ಷತೆ ಮತ್ತು ಕಾರ್ಯ ಕೌಶಲದಿಂದ ಬಳಗವನ್ನು ಮುನ್ನಡೆಸುವಲ್ಲಿ ಅಪಾರವಾದ ಕೊಡುಗೆ ನೀಡಿದ, ಮಾತ್ರವಲ್ಲ ಆ ನಂತರವೂ ಬಳಗದ ಜೊತೆ ನಿಕಟವಾದ ಒಡನಾಟ ಇಟ್ಟುಕೊಂಡು, ಬಳಗದ ಆಗು ಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ, ಮಾರ್ಗದರ್ಶನ ನೀಡುತ್ತಿದ್ದು, ಎಲ್ಲ ಸದಸ್ಯರ ಪ್ರೀತಿಗೆ ಪಾತ್ರರಾಗಿದ್ದ ಯು. ಅನಂತ ಪದ್ಮನಾಭ ಬಲ್ಲಾಳ್ ರವರು ದಿ.15.1.2025ರಂದು ದೈವಾಧೀನರಾಗಿರುವುದು ಬಳಗಕ್ಕೆ ಮಾತ್ರವಲ್ಲ ನಮ್ಮ ಸಮಾಜಕ್ಕೆ ತುಂಬಲಾರದ ನಷ್ಟ.

ಹೋಟೆಲ್ ಉದ್ಯಮದ ಜೊತೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳಲ್ಲೂ ಆಸಕ್ತಿ ಹೊಂದಿದ್ದ ದಿವಂಗತ ಬಲ್ಲಾಳ್ ಪೂರ್ಣ ಪ್ರಜ್ಞ ವಿದ್ಯಾಪೀಠ, ಪುತ್ತಿಗೆ ಮಠವೂ ಸೇರಿದಂತೆ ಹಲವಾರು ಸಂಘ, ಸಂಸ್ಥೆಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ, ಬದುಕನ್ನು ಕೃತಾರ್ಥಗೊಳಿಸಿರುತ್ತಾರೆ. ತಮ್ಮ ಸದಾಚಾರ, ಸಜ್ಜನಿಕೆ ಹೃದಯ ಶ್ರೀಮಂತಿಕೆ ಹಾಗೂ ಸದಾ ನಗು ಮುಖದ ಸ್ನೇಹ ಪರ ವ್ಯಕ್ತಿತ್ವ ಹೊಂದಿದ್ದ ಬಲ್ಲಾಳ್‌ರವರನ್ನು ದಿನಾಂಕ 23.2.2025ರಂದು ನಡೆಯಲಿರುವ ಬಳಗದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವಿಸುವ ನಿರ್ಧಾರವನ್ನು ದಿನಾಂಕ 14.12.2024 ರಂದು ನಡೆದ ಕಾರ್ಯಕಾರಿ ಸಮಿತಿಯಲ್ಲಿ ಮಾಡಿದ್ದರು. ದೈವೇಚ್ಛೆ ಬೇರೆಯೇ ಆಗಿತ್ತು. ನಮ್ಮನ್ನೆಲ್ಲಾ ಅಗಲಿದ ಅನಂತ ಪದ್ಮನಾಭ ಬಲ್ಲಾಳ್ ರವರಿಗೆ ಗೌರವದ ಶ್ರದ್ಧಾಂಜಲಿ ಹಾಗೂ ಅವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಿ ಕರುಣಿಸಲಿ ಎಂದು ಬಳಗದ ಪ್ರಾರ್ಥನೆ.

# ಢಕ್ಕೆ ಬಲಿ

## ಶ್ರೀ ಖಡ್ಗೇಶ್ವರಿ ಸಾನ್ನಿಧ್ಯದ ಬ್ರಹ್ಮಸ್ಥಾನ



ವೈ. ಜಯಂತ್ ರಾವ್

ಜನರಿಗೆ ಭಕ್ತಿ ಮನಶಾಂತಿಗಾಗಿ ದೇವಸ್ಥಾನ, ದೈವಸ್ಥಾನಗಳಂತಹ ಪೂಜಾಮಂದಿರಗಳನ್ನು ಹಿರಿಯರು ಮಾಡಿದ್ದಾರೆ. ಅನಾರೋಗ್ಯ ಅಥವಾ ಇನ್ನಿತರ ಯಾವುದೇ ಸಮಸ್ಯೆಗಳು ಬಂದಾಗ ದೇವರ ಮೊರೆ ಹೋಗುತ್ತೇವೆ. ನಮ್ಮಿಂದ ಆದಷ್ಟು ಸೇವೆಗಳನ್ನು ಮಾಡುತ್ತೇವೆ.

ಅಂತದ್ದೇ ದೇವ ಸನ್ನಿಧಾನ, ತಪೋಭೂಮಿಯೊಂದು ಬಯಲು ಆಲಯದ ರೂಪಿನಲ್ಲಿ ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿ ನೋಡಬಹುದು. ಖಡ್ಗೇಶ್ವರಿ, ವನದುರ್ಗೆಯಾಗಿ ಭಕ್ತರಿಂದ ಸೇವೆಗೊಳ್ಳುವ ಅಪರೂಪದ ಶಕ್ತಿ. ಈ ತಪೋಭೂಮಿಯ ವಿಶೇಷ ವೆಂದರೆ ಇಲ್ಲಿ ಗುಡಿ ಗೋಪುರಗಳಿಲ್ಲ, ಮೂರ್ತಿ ಪೂಜೆಯ ದರ್ಶನವಿಲ್ಲ ಹರಕೆ ಹುಂಡಿಗಳಿಲ್ಲ, ತೀರ್ಥ ಪ್ರಸಾದ ವಿತರಣೆಯಿಲ್ಲ. ಸಾನಿಧ್ಯದ ಮರಳೇ ಗಂಧ ಪ್ರಸಾದ. ಈ ಪುಣ್ಯ ನೆಲದಲ್ಲಿ ಬಡವ ಬಲ್ಲಿದರೆಂಬ ಭೇದ ಭಾವಗಳಿಲ್ಲ, ಸರ್ವರಿಗೂ ಸಮಾನತೆಯ ಮರ್ಯಾದೆ. ಎಲ್ಲರಿಗೂ ಮರಳೇ ಚಾಪೆಯಾಗಿ ಪವಡಿಸುವ ಆಸನ.

ಇಂತಹ ಪುಣ್ಯ ಕ್ಷೇತ್ರದಲ್ಲಿ ತಂಬಿಲ ಸೇವೆ ನಿತ್ಯ ಇದ್ದರೂ ಡಕ್ಕೆ ಬಲಿ ಸೇವೆ ಮಾತ್ರ ಎರಡು ವರ್ಷ ಗಳಿಗೊಮ್ಮೆ ನಡೆಯುತ್ತದೆ. ಈ ಸಮಯದಲ್ಲಿ ಬ್ರಹ್ಮ ಬನದ ಸಿರಿ ಸಿಂಗಾರದ ಅಲಂಕಾರ ಅಂತೂ ಅದ್ಭುತ. ಅದನ್ನು ವರ್ಣಿಸಲು ಯಾವೊಬ್ಬ ಲೇಖಕನ ಕುಂಚಗಳಿಗೂ ಅಸಾಧ್ಯ ಎಂದರೂ ತಪ್ಪಿಲ್ಲ. ಗಾಂಧರ್ವ ಲೋಕದ ಸೃಷ್ಟಿಯ ಭಾವನೆ. ಇಂತಹ ಸೊಬಗು ಯಾವ ಕ್ಯಾಮರಾ ವಿಡಿಯೋಗಳಲ್ಲಿ ಸೆರೆ ಹಿಡಿಯುವ ಅವಕಾಶವಿಲ್ಲ. ಇಲ್ಲಿ ವಿದ್ಯುತ್ ದೀಪ, ಧ್ವನಿ ವರ್ಧಕ ಇಲ್ಲವೇ ಇಲ್ಲ. ಬನದ ಕಡು ಕತ್ತಲನ್ನು ನಿಯಂತ್ರಿಸಲು ಪೆಟ್ರೋಮಾಕ್ಸ್, ಮತ್ತು ದೊಂದಿ ದೀಪಗಳು. ತುಪ್ಪದ ದೀಪ ಇಲ್ಲಿ ಶ್ರೇಷ್ಠ. ಇಲ್ಲಿ ಸಾವಿರಾರು ಜನ ಸೇರಿದರೂ ಯಾವುದೇ ಗಲಾಟೆ ಗದ್ದಲಗಳಿಲ್ಲ.ಕೇವಲ ಹೊರಗಿನಿಂದ ಬರುವ ಸನಾತನ ಡೋಲಿನ ಶಬ್ದ ಮತ್ತು ಒಳಗಿನಿಂದ ಕೇಳಿ ಬರುವ ನಾಗಸ್ವರದ ವಾದನ.



ಬಗೆ ಬಗೆ ಹೂಗಳು, ಎಳನೀರು, ಬಗೆ ಬಗೆಯ ಹಣ್ಣುಗಳು, ಸಿಂಗಾರ ಇವುಗಳಿಂದಲೇ ದಿನಕ್ಕೊಂದು ಅಲಂಕಾರ. ಇದರ ನಡುವೆ ನಾಗ ವೈದ್ಯರೊಂದಿಗೆ ಪಾತ್ರಿಗಳ ದರ್ಶನ. ಇದೇ ಢಕ್ಕೆ ಬಲಿ. ಎರಡು ಮೂರು ತಿಂಗಳು ನಡೆಯುವ ಈ ಸಮಯದಲ್ಲಿ ಊರಿನಲ್ಲಿ ಕೆಲವು ಕಟ್ಟುಪಾಡುಗಳು ಇರುತ್ತದೆ. ಮದುವೆ, ಉತ್ಸವ, ನಾಟಕ, ಯಕ್ಷಗಾನ ಹೀಗೆ ಯಾವುದೇ ಮನೋರಂಜನೆ ಕಾರ್ಯಕ್ರಮ ನಡೆಯಲಿಕ್ಕಿಲ್ಲ. ಶವ ಸಂಸ್ಕಾರವು ನಿಷೇಧ.



ಈ ಸೇವೆ ನೀಡುವ ಸಂಧರ್ಭದಲ್ಲಿ ಸಾವಿರಾರು ಭಕ್ತಾದಿಗಳು ಬರುತ್ತಾರೆ. ಮಧ್ಯಾಹ್ನ ಭೋಜನ ಪ್ರಸಾದ, ಸಂಜೆ ಹೂ ಹಣ್ಣು ಸಿಯಾಳದ ಹೊರೆ ಕಾಣಿಕೆಯ ದೃಶ್ಯ ದ ವೈಭೋಗ. ಇದರಿಂದ ಮಾಡಿದ ಅಲಂಕಾರ ಸಾಯಂಕಾಲ 7 ಗಂಟೆಯಿಂದ ಬೆಳಿಗ್ಗೆ 7 ಗಂಟೆಯವರೆಗೆ ಮಾತ್ರ ಇರುತ್ತದೆ. ತದನಂತರ ಪ್ರಸಾದ ರೂಪದಲ್ಲಿ ಹೂ ಹಣ್ಣುಗಳ ವಿತರಣೆ. ಇಂತಹ ಪವಿತ್ರ ಸ್ಥಳದ ದೃಶ್ಯ, ಅಲ್ಲಿ ನಡೆಯುವ ಸೇವೆ ನೋಡಲು ಎರಡು ಕಣ್ಣುಗಳು ಸಾಲದು.ಮಲ್ಲಿಗೆ, ವೀಳ್ಯದೆಲೆ ಅಡಿಕೆ, ಸಿಯಾಳ ಸಿಂಗಾರ ಇವಿಷ್ಟು ಇಲ್ಲಿಯ ದೇವರಿಗೆ ಬಹು ಪ್ರಿಯ. ಹುರುಳಿ ಹಾಗೂ ಅರಳಿನ ಪಂಚಕಜ್ಜಾಯದೊಂದಿಗೆ ಹೋದ ಭಕ್ತಾದಿಗಳಿಗೆ ಹೂ ಹಣ್ಣು ಪ್ರಸಾದದ ಭಾಗ್ಯವನ್ನು ಪಡೆಯಲು ಎರಡು ವರ್ಷ ಮತ್ತೆ ಕಾಯಬೇಕು. ತೊಂದರೆ ಸಮಸ್ಯೆಗಳಿಗೆ ಇಲ್ಲಿ ಪ್ರಾರ್ಥನೆ ಮಾಡಿದರೆ ಪರಿಹಾರ ಸಿಗುವುದು.





ನಮ್ಮ ಗ್ರಾಹಕರಿಗೆ
**ಡಿಜಿಟಲ್ ಸಾಲ**
ಅನುಭವದ ಸಬಲೀಕರಣ

- ತಾತ್ವಿಕವಾಗಿ ತ್ವರಿತ ಮಂಜೂರಾತಿ
- ಗ್ರಾಹಕರ ರಿಯಲ್ ಟೈಮ್ ದೃಢೀಕರಣ
- ಅಡಚಣೆ ರಹಿತ ದಾಖಲಾತಿ ಪ್ರಕ್ರಿಯೆ
- ಸ್ವಯಂಚಾಲಿತ ಸಾಲ ಮೌಲ್ಯಮಾಪನ & ಅರ್ಹತೆ
- ಆಕರ್ಷಕ ಬಡ್ಡಿ ದರಗಳು
- ಸರಳೀಕೃತ ಪ್ರಕ್ರಿಯೆ

ಹೆಚ್ಚಿನ ವಿವರಗಳಿಗೆ ಟೋಲ್ ಫ್ರೀ ನಂ. 1800 425 1444 ಕರೆ ಮಾಡಿ ಅಥವಾ ಸಮೀಪದ ನಮ್ಮ ಶಾಖೆಗೆ ಭೇಟಿ ಕೊಡಿ

*ಷರತ್ತುಗಳು ಅನ್ವಯ

Follow us on : / KarnatakaBank

ಕರ್ಣಾಟಕ ಬ್ಯಾಂಕ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.com

# ಸಭೆ, ಸಮಾರಂಭ ಪ್ರಶಸ್ತಿ



ಆನಂದ ಬಳಗದ ಮಾಜಿ ಅಧ್ಯಕ್ಷ ಶ್ರೀ ಪಿ.ಎಸ್. ಬಾಗಿಲ್ತಾಯ–ರವರ ಮೊಮ್ಮಗಳ ನಾಮಕರಣ **ಸಿಯಾ** ಎಂದು ಜನವರಿ 26, 2025 ರಂದು ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಬಳಗದ ವತಿಯಿಂದ ಶುಭ ಹಾರೈಕೆಗಳು.



ಬೆಂಗಳೂರು ಹೋಟೆಲುಗಳ ಸಂಘದ ವತಿಯಿಂದ ತಾರೀಖು 25.3.2025ರಂದು ಪ್ಯಾಲೇಸ್ ಗ್ರೌಂಡ್‌ನಲ್ಲಿ ನಡೆದ **‘BHA Food Awards’** ಸ್ಪರ್ಧೆಯಲ್ಲಿ ಉತ್ತಮ ಫಿಲ್ಟರ್ ಕಾಫಿ ವಿಭಾಗದಲ್ಲಿ ಮಾತಾಸ್ ಕಾಫಿಯ **ಶ್ರೀ ವಿಶ್ವನಾಥ್ ಅಡಿಗ** ಮೊದಲ ಬಹುಮಾನ ಗಳಿಸಿರುತ್ತಾರೆ. ಇವರಿಗೆ ಬಳಗದ ವತಿಯಿಂದ ಶುಭಾಶಯಗಳು.



ಬಳಗದ ಸದಸ್ಯರಾದ ಶ್ರೀ ವಿಜಯಾ ಭಟ್ ರವರ **ಷಷ್ಠಿಪೂರ್ತಿ ಸಮಾರಂಭವು** ಪೂಜೆ, ಹೋಮ–ಹವನಗಳೊಂದಿಗೆ ಅದ್ದೂರಿಯಾಗಿ 25.03.2025ರಂದು ಪುತ್ತಿಗೆ ಮಠದಲ್ಲಿ ನಡೆಯಿತು. ಇವರಿಗೆ ಶುಭ ಹಾರೈಕೆಗಳು.



ಸ್ಮರಣ ಭಾರತ ಫೌಂಡೇಷನ್ ತಾರೀಖು 23.03.2025ರಂದು ಬೆಂಗಳೂರಿನಲ್ಲಿ ನಡೆಸಿದ **'Mr. & Mrs. Dazzling India National Level Beauty Pageant'** ಸ್ಪರ್ಧೆಯಲ್ಲಿ **ಡಾ. ಪ್ರವೀಣಾ ಗೋಪಾಲ ಕೃಷ್ಣರವರು 'Mrs. Dazzling India 2025' & 'Dazzling Popular Star'** ಪ್ರಶಸ್ತಿಯನ್ನು ಗಳಿಸಿರುತ್ತಾರೆ. ಬಳಗದ ವತಿಯಿಂದ ಇವರಿಗೆ ಶುಭಾಶಯಗಳು



ನಮ್ಮ ಸದಸ್ಯರಾದ ಶ್ರೀ ಹರೀಶ್ ರಾವ್ ಎಂ. ಮತ್ತು ಅನುಪಮಾ ಅವರ ಸುಪುತ್ರ ಚಿ॥ ರಾ॥ ಸುಮನ್ ರಾವ್ ಅವರ **ವಿವಾಹ** ಡಾ॥ ವೇಣುಗೋಪಾಲ ರಾವ್ ಮತ್ತು ಡಾ॥ ಮಮತಾ ರವರ ಪುತ್ರಿ ಚಿ॥ ಸೌ॥ ಡಾ॥ ವರ್ಷಾ ರಾವ್ ಅವರೊಂದಿಗೆ 06.12.2024ರಂದು ವಿಜೃಂಭಣೆಯಿಂದ ನೆರವೇರಿತು. ನವದಂಪತಿಗಳಿಗೆ ಬಳಗದಿಂದ ಶುಭ ಹಾರೈಕೆಗಳು.




ಆನಂದ ಬಳಗದ ಹಿರಿಯ ಸದಸ್ಯರು, ಹೊಸಕೋಟೆ ಎಂ.ವಿ.ಜೆ. ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಯ ಕಾರ್ಯ ನಿರ್ವಾಹಕ ನಿರ್ದೇಶಕರಾದ ಹೃದ್ರೋಗ ತಜ್ಞ ಡಾ. ಮೋಹನ್ ರಾವ್ ರವರಿಗೆ ತಾ. 11.01.2025ರಂದು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ರವರು **‘New Year Award-2025’** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ. ಇವರಿಗೆ ಅಭಿನಂದನೆಗಳು

*With Best Compliments from :*

RISPL
Rao Ideal Services Pvt Ltd

# P.C. RAO

## Rao Ideal Services Pvt Ltd

***Specialists in Staff Outsourcing and Facility Management***

We are specialized in Environmental Maintenance, Staff Outsourcing, Statutory Support, and other corporate services in different sectors like Automobile, Consumer Durable, Healthcare / Medical / R &D, Industrial Products / Heavy Machinery, Manufacturing, Purchase / Logistics / Supply Chain, Hotels Industry, Packaging etc.

No. 63, 5th Cross, Vasanth Nagar
Bangalore - 560 052

+91 - 98444 94630
raoideal@yahoo.co.in

M. K. Gurumurthy

# G. S. POWER SYSTEMS

**Authorised Dealers For :**

**kirloskar Diesel Generators from 2 KVA to 1500 KVA**

**Since 35 Years.**



**Available Generators for Hiring / Rental**

**#21, 100 Ft. Ring Road, 3rd Cross, 3rd Phase, 6th Block, Banashankari**
**Opp. Brnad Factory, Near Kamakya Theatre, Bangalore - 560 085**
**Phone : 080-26893606 / 26893607**
**Mobile : 9844022692, 7760998652**
**E-mail: info@gspowersystems.com/gspowerblr@gmail.com**

**www.gspowersystems.com**

# Entrepreneurship - Divine Valley Resorts



M. Krishna Prasad

ANANDA BALAGA member and past convenor of Yuva Vibhaga, Mr. Satyaprakash Upadhyaya, along with his son, Mr. Mohnish, and family, have promoted a RESORT called "THE DIVINE VALLEY" at K. Manchahalli, 12 Km from Sakleshpura.

I happened to go on a tour for 2 days with my friends Mr Ananthraj and Mr Gopalakrishna from 28 February 2025. We drove down from Bengaluru to reach the resort at 1 pm, had our lunch, and went to our cottage, which was well arranged.

The resort, as the name suggests, is a "divine valley" nestled in the lush green valley of the Western Ghats. It has 24 well-appointed rooms, cottages, and dome tents. We stayed in a cottage with a portico overlooking the green valley. The resort's landscape is well-tended with stones and green grass. Hundreds of fruit trees and flowering plants are pleasant for the eyes.

The morning 15-minute walk to a flowing stream of water through dense vegetation and the sound of chirping birds, which can be extended to a walk through a coffee estate, is a delight. In the evening, a 1 km travel to the sunset point at the peak of a hill and waiting for the colors of the sky changing with the setting sun is truly mesmerizing. The spacious dining area with a multicuisine breakfast and food is a gastronomical delight. The infinity pool, campfire, and play area are all add-ons to make your stay enjoyable.







The resort is worth a visit and stay. forget the chaotic life of cities and rest in the lap of divine nature without distraction from television and newspapers. experience true bliss in life with nature, food, friends/family, and leisure.

www.devandhariresorts@gmail.com Mobile : 90361 42233


BAYAR'S
COFFEE
The Warmth of Goodness!
ಬಾಯರ್ಸ್
ಕಾಫೀ
ಅತ್ಯುತ್ತಮ ರುಚಿ
ಮನ ಅರಳಿಸುವ ಪರಿಮಳ
BAYAR'S
COFFEE
The Warmth of Goodness!
80 DEGREE
Experience Premium Filter Coffee
BAYAR'S
Kohinoor Tea
GOLD
ಆಯ್ದ ಶ್ರೇಷ್ಠ ಕಾಫಿ ಬೀಜಗಳಿಂದ ತಯಾರಾದ ಪಕ್ವತೆಯ
ಮಿಶ್ರಣ ಪರಿಪೂರ್ಣ ರುಚಿಯೊಂದಿಗೆ, ಎಂದೆಂದಿಗೂ ನಿಮಗಾಗಿ

## ಏಪ್ರಿಲ್ – ಜುಲೈ 2025ರ ಅವಧಿಯ ವಿಶೇಷ ದಿನಗಳು

| | |
|---|---|
| **ಏಪ್ರಿಲ್** | |
| 14, ಸೋಮವಾರ | ಸೌರ ಯುಗಾದಿ (ವಿಷು), ಸೌರ ವಿಶ್ವಾವಸು ಸಂವತ್ಸರ ಆರಂಭ |
| 24, ಗುರುವಾರ | ಏಕಾದಶೀ |
| 27, ಭಾನುವಾರ | ಅಮಾವಾಸ್ಯೆ |
| 28, ಸೋಮವಾರ | ವೈಶಾಖ ಮಾಸಾರಂಭ |
| 30, ಬುಧವಾರ | ಅಕ್ಷಯ ತದಿಗೆ |
| **ಮೇ** | |
| 08, ಗುರುವಾರ | ಏಕಾದಶೀ |
| 11, ಭಾನುವಾರ | ನರಸಿಂಹ ಜಯಂತಿ, ಬಳಗದ ವಸಂತೋತ್ಸವ |
| 12, ಸೋಮವಾರ | ಹುಣ್ಣಿಮೆ |
| 14, ಬುಧವಾರ | ವೃಷಭ ಸಂಕ್ರಮಣ |
| 23, ಶುಕ್ರವಾರ | ಏಕಾದಶೀ |
| 27, ಮಂಗಳವಾರ | ಅಮಾವಾಸ್ಯೆ |
| 28, ಬುಧವಾರ | ಜ್ಯೇಷ್ಠ ಮಾಸ, ಗ್ರೀಷ್ಮ ಋತು ಆರಂಭ |
| **ಜೂನ್** | |
| 05, ಗುರುವಾರ | ಭಾಗೀರಥಿ ಜನ್ಮದಿನ |
| 07, ಶನಿವಾರ | ಏಕಾದಶೀ |
| 11, ಬುಧವಾರ | ಹುಣ್ಣಿಮೆ |
| 15, ಭಾನುವಾರ | ಮಿಥುನ ಸಂಕ್ರಮಣ |
| 22, ಭಾನುವಾರ | ಏಕಾದಶೀ |
| 25, ಬುಧವಾರ | ಅಮಾವಾಸ್ಯೆ |
| 26, ಗುರುವಾರ | ಆಷಾಢ ಮಾಸಾರಂಭ |
| **ಜುಲೈ** | |
| 06, ಭಾನುವಾರ | ಪ್ರಥಮೈಕಾದಶೀ, ತಪ್ತ ಮುದ್ರಾಧಾರಣ ಚಾತುರ್ಮಾಸ್ಯಾರಂಭ |
| 07, ಸೋಮವಾರ | ಶಾಕ ವ್ರತಾರಂಭ |
| 10, ಗುರುವಾರ | ಗುರು ಪೂರ್ಣಿಮಾ |
| 16, ಬುಧವಾರ | ಕರ್ಕಾಟಕ ಸಂಕ್ರಮಣ |
| 21, ಸೋಮವಾರ | ಏಕಾದಶೀ |
| 24, ಗುರುವಾರ | ಭೀಮನ ಅಮಾವಾಸ್ಯೆ |
| 25, ಶುಕ್ರವಾರ | ವರ್ಷ ಋತು, ಶ್ರಾವಣ ಮಾಸಾರಂಭ |

(ಆಧಾರ : ಉಡುಪಿ ಶ್ರೀ ಪೂರ್ಣಪ್ರಜ್ಞ ಪಂಚಾಂಗಂ)

## New Members of Ananda Balaga From 1st October 2024 to 31st March 2025

| Sl No | Memb. No. | Name | Proposed By |
|---|---|---|---|
| 1 | MP0025 | Subramanya Undar Bhat | B S Balachandra Tholpady - MD 0131 |
| 2 | MD0642 | Ashok Rao Kudukolle | K N Adiga - DM059 |
| 3 | MD0643 | Rajaneesh Tantry | P. Vittaldas Tantry - LM 0431 |
| 4 | MD0644 | Harish K Bhat | Y. Jayanth Rao - DM0228 |
| 5 | MD0645 | Prashanth G B | B N Ganesh Bhat - LM 0590 |
| 6 | MD0646 | Rajath Bhat H R | Sudheendra - MD0503 |
| 7 | MD0647 | Suraj K S | A Sandeep Rao - DM0278 |
| 8 | MD0648 | Kuldeep Somayaji | M K Gurumurthy - DM0066 |
| 9 | MD0649 | Karunakar N S | K M Padmavathy - MD0537 |
| 10 | MD0650 | Nagesh Holla V | M K Gurumurthy - DM0066 |
| 11 | MD0651 | Kishore Bhat P | P S Bhat - DM0267 |
| 12 | MD0652 | Ramesh Adiga | M K Gurumurthy - DM0066 |
| 13 | Poshaka - P038 | Handadi Keshava Rao | Handadi Sathyanarayana Rao |
| 14 | MD0653 | Mitra Venkatraja | M K Prasad - LM0546 |
| 15 | MD0654 | Supreeth S Chadaga | Seshanarayana Chadaga - MD0134 |
| 16 | MD0655 | Suhas P K | Gopalakrishna Kunjathaya - DM0008 |
| 17 | MD0656 | Sanjay Saralaya | M K Prasad - LM0546 |
| 18 | MD0657 | Rahul Holla M | Manjunath Holla - MD0335 |
| 19 | MD0658 | Yashas Kumar | B Ramachandra Upadhya - MD 0050 |
| 20 | MD0659 | Karthik Kumar | B Ramachandra Upadhya - MD 0050 |
| 21 | MD0660 | Ravikrishna P S | M Mohan Rao - LM0320 |
| 22 | MD0661 | B. Sathyanarana Adiga | M. Gurumurthy Kalkura MD0302 |
| 23 | MD0662 | Gokul K S | Ranjith Yerakadithaya - GM070 |
| 24 | MD0663 | Keerthish G Bhat | Vishwanath Adiga - MD0389 |
| 25 | MD0664 | Venkatesh P S | Gopalakrishna Kunjathaya - DM0008 |
| 26 | MD0665 | Rajat R Achar | Ramananda Achar LM0195 and M K Gurumurthy DM66 |
| 27 | MD0666 | Sachin Tanthry | Ramananda Achar LM0195 and M K Gurumurthy DM66 |
| 28 | MD0667 | Rashmi Bhatt Krishna | M K Prasad - LM0546 |

*With Best Compliments from :*

# DEVARAJ KARABA

## Water Proofing Consultant

**SERVICES OFFERED :**

- WATER DAMAGE RESTORATION SOLUTIONS
- BEST TECHNOLOGY OF WATER PROOFING TREATMENT&
- SEEPAGE PROBLEMS FOR ALL TYPES OF BUILDING

NO. 2032/14, JANAKA JANANI, NEAR MANGNAHALLY CROSS,
5TH BLOCK, SRI M.V. LAYOUT, BENGALURU -560084
Email : devkaraba1@gmail.com

**Contact :**

**99860 74608 / 98450 23608**

*With Best Complements From*

# ENGINNERING CONSULTANCY SERVICES FOR CONSTRUCTION

## CRUTHI CONSULTANTS CONSORTIUM PVT LTD

**SERVICES OFFERED IN:**

- Structurd Engineering
- Civil Consultancy
- Project Management
- NDT Services & Retro Fitting Engineering
- Water & Sewerage, Fire etc.,
- Enelectrical & Security
- HVAC & Networking

**SERVICES OFFERED IN:**

IT INDUSTRY
FACTORIES
INSTITUTIONS
HOTELS & RESORTS
COMMERCIAL
RESIDENTIAL



No. 204, 2nd Main Road, 4th Block,
Rajajinagar, Bengaluru - 560 010
Tel : +91 80 2315 2014, +91 99456 66306
E-mail: infor@cruthi.com Website : www.cruthi.com

CONTACT :

| | |
|---|---|
| MR. DINESH RAO MUNDRUPPADY | M : 99456 88955 |
| MR. VASUDEVAN T.S. | M : 98450 26743 |
| MR. VIJAY KUMAR KULKARNI | M : 99456 96649 |

# ಅನಿಸಿಕೆ

ಪ್ರೀತಿಯ ಕೃಷ್ಣ ಪ್ರಸಾದ್, ನಿಮ್ಮ ಸಂಪಾದಕತ್ವದಲ್ಲಿ ಭೃಗುವಾಣಿ ಅತ್ಯುತ್ತಮ ರೀತಿಯಲ್ಲಿ ಬರುತ್ತಿದೆ. ಸಚಿತ್ರ ವರ್ಣಮಯ ಪತ್ರಿಕೆ ಆನಂದ ಬಳಗದ ಹೆಮ್ಮೆಯ ಮುಖಪತ್ರಿಕೆ.

**– ಬಿ. ರಾಮದಾಸ ತಂತ್ರಿ**

**ವಿ.ಸೂ. – ಬಳಗದ ಹಿರಿಯ ಸದಸ್ಯರಾದ ಶ್ರೀ ಬಿ. ರಾಮದಾಸ ತಂತ್ರಿ ಇವರು ಆನಂದ ಬಳಗದ ಮೊದಲ ಪತ್ರಿಕೆ 'ಆನಂದ ವಾಣಿ'ಯ ಸಂಪಾದಕರಾಗಿದ್ದರು.**

* * *

ಆನಂದ ಬಳಗದ ಭೃಗುವಾಣಿ ಇತ್ತೀಚಿನ ದಿನಗಳಲ್ಲಿ ಸುಂದರವಾಗಿ ಮೂಡಿ ಬರುತ್ತಿದೆ. ಬಳಗದ ಎಲ್ಲಾ ಚಟುವಟಿಕೆಗಳ ಮಾಹಿತಿ ಇರುವುದರಿಂದ ಓದಲು ಸಂತೋಷವಾಗುತ್ತದೆ. ಸಾಮಾಜಿಕ ಜಾಲತಾಣಗಳ ಗೀಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಸದಸ್ಯರನ್ನು ಬಳಗದ ಚಟುವಟಿಕೆಗಳಿಗೆ ಆಕರ್ಷಿಸುವುದು ದೊಡ್ಡ ಸವಾಲೇ ಆಗಿದ್ದರೂ, ಕಾರ್ಯಕಾರಿ ಸಮಿತಿ ಶ್ಲಾಘನೀಯ ಯಶಸ್ಸನ್ನು ಪಡೆದಿದೆ. ಉತ್ತಮ ಕಾರ್ಯ ಹೀಗೆ ಮುಂದುವರೆಯಲಿ.

**– ಸಂಪತ್ ಚಂದ್ರ ಎಸ್.ಎನ್.**

Congratulations. Well done. Excellent Issue of Bhruguvani has come out. Every Issue is coming out with improvement.... Like house magazine. Please keep it up.

**- Jayaprakash Rao, Mysore.**

* * *

ಭೃಗುವಾಣಿ ತುಂಬ ಸುಂದರವಾಗಿ ಪ್ರಕಟವಾಗುತ್ತಿದೆ. ಧಾರ್ಮಿಕ ವಿಚಾರಗಳು ವಿವರವಾಗಿ ಮತ್ತು ವೈವಿಧ್ಯಮಯವಾಗಿ ಇರುತ್ತದೆ. ಕಳೆದ ಸಂಚಿಕೆಯಲ್ಲಿ ಶೋಭಾ ರಾವ್ ಬರೆದ **BE A SMILE MAKER** ಲೇಖನ ಬಹಳ ಇಷ್ಟವಾಯಿತು.

**– ಶ್ರೀಮತಿ ಶ್ಯಾಮಲಾ ಆಚಾರ್**

* * *

ಪ್ರವಾಸ ಕಥನ ಮಹಿಳಾ ವಿಭಾಗದಿಂದ ಕೈಗೊಂಡ ಅಯೋಧ್ಯ ಕಾಶಿ, ಗಯಾ, ಪ್ರಯಾಗ ಇತ್ಯಾದಿ ಏಳು ದಿನದ ಪ್ರವಾಸ ಸಂಪೂರ್ಣ ಮಾಹಿತಿಯನ್ನು ನೀಡಿದ ಅತ್ಯುತ್ತಮ ಲೇಖನವನ್ನು ಶ್ರೀಮತಿ ಶೋಭಾ ರಾಧಾಕೃಷ್ಣ ಚೆನ್ನಾಗಿ ಮನಮುಟ್ಟುವಂತೆ ಬರೆದಿದ್ದಾರೆ. ಇನ್ನಷ್ಟು ಲೇಖನಗಳು ಇವರಿಂದ ಮೂಡಿಬರಲಿ. **– ಶ್ರೀಮತಿ ಜಾಹ್ನವಿ ಆಚಾರ್ಯ**

## ನಮ್ಮವರಿಂದ ನಮ್ಮವರಿಗಾಗಿ

| ಕ್ರ.ಸ | ಹೆಸರು | ಮೊಬೈಲ್ ನಂ. | ಕೆಲಸ/ಕಾರ್ಯ |
|---|---|---|---|
| 1 | ವೇದಬ್ರಹ್ಮ ವರದರಾಜ ತಂತ್ರಿ | 9845617262 | ಪೌರೋಹಿತ್ಯ – ವಿದ್ಯಾಪೀಠದ ಬಳಿ |
| 2 | ಶ್ರೀ ರಂಜಿತ್ ಯೆಡಪಡಿತ್ತಾಯ | 9591994646 | ಆನ್‌ಲೈನ್ ಮ್ಯಾಟ್ರಿಮೋನಿಯಲ್ ರಿಜಿಸ್ಟ್ರೇಷನ್, www.BRAHMINS SAPTHAPADI.Com |
| 3 | ಶ್ರೀಮತಿ ಪ್ರೇಮ | 8971775697 | ಉಪ್ಪಿನಕಾಯಿ, ಸಂಡಿಗೆ ಇತ್ಯಾದಿ. ಎನ್.ಆರ್. ಕಾಲೋನಿ |
| 4 | ಶ್ರೀ ಶಿವರಾಮ ಭಟ್ | 7483806394 | ಅಡುಗೆ, ಕೇಟರಿಂಗ್, ನಾಗರಬಾವಿ |
| 5 | ಶ್ರೀಮತಿ ವಾಣಿಶ್ರೀ | 9964142436/ 9881509568 | ವಿಧವಿಧವಾದ ಉಪ್ಪಿನಕಾಯಿ, ಉದ್ದಿನ ಹಪ್ಪಳ ಇತ್ಯಾದಿ |
| 6 | ಶ್ರೀಮತಿ ಸುಧಾ ಆಚಾರ್ಯ | 8123206548 | ಮಂಗಳಾರತಿಗೆ ಬತ್ತಿ, ಹೂ, ಗೆಜ್ಜೆವಸ್ತ್ರ, ಹೂಬತ್ತಿ, ಯಲಹಂಕ |
| 7 | ಶ್ರೀ ರಾಮಕೃಷ್ಣ ಭಟ್ | 9449110727/ 7760596275 | ಸಾಂಪ್ರದಾಯಿಕವಾಗಿ ಮನೆಯಲ್ಲಿ ಮಾಡಿರುವ ಸಾವಯವ ಸಿಹಿ ತಿಂಡಿಗಳು, ಲಡ್ಡು ಇತ್ಯಾದಿ |
| 8 | ಶ್ರೀಮತಿ ಪ್ರತಿಮಾ ಉಡುಪ | 8892377505 | ರಂಗೋಲಿ ಬಿಡಿಸುವುದು, ವಿವಿಧ ಸಮಾರಂಭಗಳಿಗೆ ಮತ್ತು ರಂಗೋಲಿ ಬಿಡಿಸಲು ಕಲಿಸುವ ವರ್ಕ್ ಶಾಪ್‌ಗಳು |
| 9 | ಶ್ರೀ ಅಶ್ವಿನ್ ಕುಮಾರ್ ಸಿ.ವಿ. | 8861132332/ 8762135711 | ಜ್ಞಾನ ಮಯೂರ, ಕೊಡಗು – ಕುಂಚ, ನೃತ್ಯ, ಗಾಯನ ವಿವಿಧ ಸಮಾರಂಭಗಳಿಗೆ |
| 10 | ಶ್ರೀ ಮಟ್ಟಿ ರಾಮಚಂದ್ರ ರಾವ್ | 9448670741 | ಫೋಟೋಗ್ರಫಿ, ವಿವಿಧ ಸಮಾರಂಭಗಳಿಗೆ, ವಿದ್ಯಾಪೀಠ |

**ಈ ಅಂಕಣದಲ್ಲಿ ಹೆಸರನ್ನು ನೋಂದಾಯಿಸಬೇಕಾದ ಸದಸ್ಯರು**

**ಡಾ. ಕೆ.ಎನ್. ಅಡಿಗ 96862 04659 ಅಥವಾ ಶ್ರೀ ಗುರುಮೂರ್ತಿ 98440 22692 ಇವರನ್ನು ಸಂಪರ್ಕಿಸಿ**




ಎಂ.ಜಿ.ಎಸ್.ಕೆ
ವಧುವರ ಅನ್ವೇಷಣಾ ಕೇಂದ್ರ
ಬೆಂಗಳೂರು

ತ್ರಿಮತಸ್ಥ ಬ್ರಾಹ್ಮಣ ವಧುವರರ ಮಾಹಿತಿಗಾಗಿ 1998ರಿಂದ ಕತ್ರಿಗುಪ್ಪೆಯಲ್ಲಿರುವ ಈ ಸಂಸ್ಥೆಯನ್ನು ಆಸಕ್ತರು ವಿವರಗಳಿಗೆ ಸಂಪರ್ಕಿಸಿ



ಸುಮಂಗಲ ಎಸ್ ಆಚಾರ್
9844320328

Matti RAMACHANDRA RAO
Artist & Photographer
9448670741

Namma Ramanne

- Photography & Videography Service
- Event Photography
- Pre Wedding
- Candid, Family Photos

e-mail : matturao1959@gmail.com



No. 1007, 9th Main,
3rd Cross,
Sinivasanagara,
Bengaluru-50

# ಆನಂದ ಸಭಾಗೃಹದ ಬಾಡಿಗೆಯಲ್ಲಿ ಬಳಗದ ಸದಸ್ಯರಿಗೆ ರಿಯಾಯಿತಿ

ಆನಂದ ಬಳಗ ಹಾಗೂ ಆನಂದ ಬಳಗ ಚಾರಿಟೇಬಲ್ ಟ್ರಸ್ಟ್ ಜಂಟಿಯಾಗಿ ನಿರ್ವಹಿಸುತ್ತಿರುವ ಬನ್ನೇರು ಘಟ್ಟ ರಸ್ತೆಯಲ್ಲಿರುವ ಆನಂದ ಸಭಾಗೃಹವನ್ನು ಇದೀಗ ಸದಸ್ಯರು ರಿಯಾಯಿತಿ ದರದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಆನಂದ ಸಭಾಗೃಹಕ್ಕೆ ಒಂದು ದಿನಕ್ಕೆ ಸಂಜೆ 4 ಗಂಟೆಯಿಂದ ಮರುದಿನ ಸಂಜೆ 4 ಗಂಟೆಯವರೆಗೆ ) ಮೂಲ ಬಾಡಿಗೆ ರೂ. 1 ಲಕ್ಷ + 18% ಜಿಎಸ್‌ಟಿ ಹಾಗೂ ವಿದ್ಯುತ್, ಸ್ವಚ್ಛತೆ, ಜನರೇಟರ್, ವಾಚ್‌ಮ್ಯಾನ್, ಕಸ ವಿಲೇವಾರಿ ಮುಂತಾದ ವೆಚ್ಚಗ ಬಾಬ್ತು ರೂ 42,000. ಹೀಗೆ ಒಟ್ಟು ರೂ. 1.60 ಲಕ್ಷ ನಿಗದಿ ಪಡಿಸಲಾಗಿದೆ.

ಆನಂದ ಬಳಗದವರು ಸಭಾಗೃಹವನ್ನು ನಿರ್ಮಿಸುವ ಹಂತದಲ್ಲಿ ನೀಡಿರುವ ಉದಾರ ದೇಣಿಗೆಯನ್ನು ಪರಿಗಣಿಸಿ ಹಾಗೂ ಬಳಗದ ಸದಸ್ಯರು ಸಭಾಗೃಹವನ್ನು ಬಳಸಲು ಉತ್ತೇಜನ ನೀಡುವ ಉದ್ದೇಶದಿಂದ ಬಳಗದ ಸದಸ್ಯರಿಗೆ ಮೂಲ ಬಾಡಿಗೆ ದರದಲ್ಲಿ ಶೇ. 20 ರಷ್ಟು ರಿಯಾಯಿತಿಯನ್ನು ನೀಡಲು ನಿರ್ಧರಿಸಲಾಗಿದೆ.

ಈ ರಿಯಾಯಿತಿಯನ್ನು ಬಳಗದ ನೋಂದಾಯಿತ ಸದಸ್ಯರು, ಸದಸ್ಯರ ಗಂಡ / ಹೆಂಡತಿ, ಸದಸ್ಯರ ಮಗ ಮತ್ತು ಮಗಳು ಹಾಗೂ ಸದಸ್ಯರ ತಂದೆ/ತಾಯಿಗೆ ಸಂಬಂಧ ಪಟ್ಟ ಸಮಾರಂಭಗಳನ್ನು ಮಾಡಲು ಮಾತ್ರ ನೀಡಲಾಗುವುದು.

ಬಳಗದ ಸದಸ್ಯ ಬಂಧುಗಳು ಈ ಸವಲತ್ತನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿನಂತಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಮತ್ತು ಕಾದಿರಿಸಲು ಸಂಪರ್ಕಿಸಿ :

**ಯು.ಎನ್. ರಾಮಮೂರ್ತಿ ಉಪಾಧ್ಯ,**

ವ್ಯವಸ್ಥಾಪಕರು, ಮೊಬೈಲ್ : 91484 48248


## ANANDA SABHA GRUHA

A UNIT OF ANANDA BALAGA CHARITABLE TRUST





- Capacity: Up to 800 guests.
- Ideal for weddings, receptions, and ceremonies.
- Parking: Ground and basement levels.
- Dining: 300-seat capacity.
- Modern kitchen with the latest equipment.
- Power: Generator facility available.
- Accommodation: Bride, groom, and 10 guest rooms.

E-mail:
**anandasabhagruha@gmail.com**

Website:
**anandasabhagruha.com**

# 23, Gollahalli,
Bannerghatta Main Road,
Bannerghatta, Bangalore - 560 083.

For Booking Contact
U. N. Ramamoorthy Upadhya
**9148448248**

# Body, Mind and breath



K. V. Rao

We shall make a modest attempt to explore the relationship between body, mind, and breath. Here are some thoughts:

## Body and Mind:

* **The "Inside" Question:** The idea that the body resides within the mind is a profound concept. It suggests that our physical reality is a manifestation of our consciousness, a perspective explored in various spiritual and philosophical traditions.

* **Mind as Boss:** The analogy of the mind as the boss and the body as the servant resonates with many. Our thoughts and intentions significantly influence our actions and bodily responses. However, it's also important to acknowledge the interconnectedness and interdependence of the two. The body provides feedback to the mind through sensations and emotions, influencing our thoughts and feelings.

## Breath:

* **The Ever-Present Experience:** The concept of "breath" as an ever-present experience, even during sleep, is intriguing. It could be interpreted as a fundamental awareness or consciousness that underlies all other experiences.

* **The Source of Life:** Recognizing breadth as the source of life emphasizes the importance of acknowledging and appreciating the underlying life force that sustains us.

## Mind-Body Control:

* **Overcoming Laziness:** The example of overcoming laziness through mindful action highlights the power of the mind to influence and direct bodily behavior. It demonstrates that our thoughts and intentions can override immediate impulses and motivate us towards our goals.

## Further Exploration:

I look forward to the next installment where we delve deeper into the care of the mind and body.

## Overall:

This piece offers a thought-provoking perspective on the intricate relationship between body, mind, and the underlying essence of existence. It encourages readers to explore their own relationship with these concepts and consider how they can cultivate a more harmonious and fulfilling life.

### ಸದಸ್ಯರಲ್ಲಿ ಮನವಿ

ಸದಸ್ಯರು ಭೃಗುವಾಣಿ ಪತ್ರಿಕೆಗೆ ಲೇಖನಗಳನ್ನು
ಈ ಕೆಳಗಿನ ಮೇಲ್ ಐಡಿಗೆ ಬರೆದು ಕಳುಹಿಸಿ. ತಾವು
ಕಳುಹಿಸುವ ಬರಹಗಳು ಸಂಸ್ಕಾರ, ದೇವಸ್ಥಾನಗಳು,
ಕಿರುಕಥೆ, ಕವನ, ಆಚಾರ ವಿಚಾರಗಳು, ಅಡುಗೆ,
ವ್ಯಾಪಾರ ವ್ಯವಹಾರಕ್ಕೆ ಸಂಬಂಧಪಟ್ಟವುಗಳಾಗಿರಲಿ.
krispa8888@gmail.com


For sure relief from CONSTIPATION
Non Habit forming
Anuloma®
DS Tablets / Churna
Anuloma DS
Smooth & Strain Free Evacuation
Anuloma
Arthnex®
Oil / Emulgel
Improved
In Arthritis & Musculoskeletal pain
...For safe and comprehensive management of pain
Arthnex
Pain Relief Oil
Arthnex Emulgel
Available at all Ayurvedic Medical Stores
BPRL
Manufactured by
Bangalore Pharmaceutical & Research Laboratory (P) Ltd.
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhrugu Vani Kannada-Tulu-English Quarterly KARMUL/2021/79912 Bengaluru, January-March 2025 No. of Pages : 40 (36+4)




If undelivered please return to:
Ananda Balaga
Ananda Sabha Gruha
23, Gollahalli, Bannerghatta Main Rd
Bannerghatta, Bengaluru-560 083

Bhrugu Vani - Printed & Published by P.S. Bagilthaya, on behalf of Ananda Balaga, Printed at Omkar Offset Printers, 3/3, 1st Main Road, New Tharagupet, Bengaluru - 560 002. Published at Ananda Balaga. 23, Gollahalli, Bannerghatta Main Road, Bengaluru - 560083. Editor : M. Krishna Prasad